5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others:**
   a. The project proponents shall provide employment to at least one member of the family of each land looser as the land is being acquired through KIADB.
   b. The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c. The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department

This approval is valid for a period of two years from the date of issue.

By Order and in the name of the Governor of Karnataka,

PR. 1468

APARNA PAVATE
Desk Officer (Technical Cell)
Commerce & Industries Department

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, ದಿನಾಂಕ : 19-1-2009.
2. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, (1) ದಿನಾಂಕ : 4-2-2009.
3. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, (2) ದಿನಾಂಕ : 4-2-2009.
4. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, ದಿನಾಂಕ : 30-3-2009.
5. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, ದಿನಾಂಕ : 22-6-2009.
6. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, ದಿನಾಂಕ : 26-9-2009.
7. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಜವಿ 2008, ದಿನಾಂಕ : 24-10-2009.
8. ನಿರ್ದೇಶಕರು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಹಾಗೂ ಅಧ್ಯಕ್ಷರು, ಬಿಪಿಓ ಸ್ಕ್ರೀನಿಂಗ್ ಕಮಿಟಿ ಇವರ ಪತ್ರದ ಸಂಖ್ಯೆ : ಕೆಬಿಟ್ಸ್/ಪಿಇ/ಗ್ರಾಮೀಣ ಬಿಪಿಓ ಕೇಂದ್ರ/42/09-10, ದಿನಾಂಕ : 26-5-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಒಂದು ಲಕ್ಷಕ್ಕಿಂತ ಕಡಿಮೇ ಜನಸಂಖ್ಯೆಯುಳ್ಳ ತಾಲ್ಲೂಕು/ಹೋಬಳಿ ಕೇಂದ್ರ ಸ್ಥಳಗಳಲ್ಲಿ ಗ್ರಾಮಾಂತರ ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸುವ ಹೊಸ ಯೋಜನೆಗೆ 2008-09 ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ ಅರ್ಜಿಯ ನಮೂನೆಯನ್ನು ನಿಗದಿಪಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧದ ಅರ್ಜಿಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಅರ್ಹ ಅರ್ಜಿಗಳನ್ನು ಶಿಫಾರಸ್ಸು ಮಾಡುವ ಸಂಬಂಧ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸ್ಕ್ರೀನಿಂಗ್ ಕಮಿಟಿಯನ್ನು ರಚಿಸಲಾಗಿದೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 2008-09ನೇ ಸಾಲಿನ ರೂ. 100 ಲಕ್ಷಗಳನ್ನು ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಮೇಲೆ (5)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009-10ನೇ ಸಾಲಿನಲ್ಲಿ ನಾಲ್ಕು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ (6)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009-10ನೇ ಸಾಲಿನಲ್ಲಿ ಎಂಟು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ (7)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009-10ನೇ ಸಾಲಿನಲ್ಲಿ ಎಂಟು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ (8)ರಲ್ಲಿ ಓದಲಾದ ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಪತ್ರದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಕೆಬಿಟ್ಸ್ ಸಂಸ್ಥೆಯವರು ಅರ್ಜಿಗಳನ್ನು ಆಹ್ವಾನಿಸಿದ್ದು, ನಿಗದಿಪಡಿಸಿದ ಕೊನೆಯ ದಿನಾಂಕ : 20-4-2010ರೊಳಗೆ 139 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳನ್ನು ಸರ್ಕಾರಿ ಆದೇಶ ದಿನಾಂಕ 4-2-2009ರಲ್ಲಿ ರಚಿಸಲಾದ ಸ್ಕ್ರೀನಿಂಗ್ ಕಮಿಟಿಯು ಸರ್ಕಾರದ ಮಾರ್ಗಸೂಚಿಯನ್ವಯ ಅರ್ಜಿಗಳನ್ನು ಪರಿಶೀಲಿಸಿ ಅರ್ಹರಾದ 27 ಅರ್ಜಿದಾರರನ್ನು ವೈಯಕ್ತಿಕ ಸಂದರ್ಶನ ನಡೆಸಿ, ಈ ಕೆಳಕಂಡ ನಾಲ್ಕು ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಸರ್ಕಾರದಿಂದ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕ್ರಮ ಸಂಖ್ಯೆ	**ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ** ಶ್ರೀ/ಶ್ರೀಮತಿ	ಬಿಪಿಓ ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
1	ಅಮಿತ್‌ಸೇನ್ ಎಸ್. ಜಬನ್ನಾವರ್ (ಪಾರ್ಟನರ್), ಫಾಸ್ಟ್ ಬಕ್ಸ್ ಸರ್ವೀಸಸ್, 126, 1ನೇ ಮಹಡಿ, ಡಿ.ಆರ್. ಟವರ್, ಡಿಸ್ಪೆನ್ಸರಿ ರಸ್ತೆ, ಬೆಂಗಳೂರು	ಸಂಕೇಶ್ವರ, ಬೆಳಗಾವಿ ಜಿಲ್ಲೆ
2	ಕಲ್ಪನಾ ಜಿ. ಕೃಷ್ಣ, ನವೋದಯ ರಾಜೀವ್ ನಗರ, ಪಾರ್ಕ್ ಹತ್ತಿರ, ಚಿಂತಾಮಣಿ	ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ
3	ಅಭಿಷೇಕ್, ಡಿ. ಮಾವಿನಕುರ್ವೆ, 115, ರಘುರಾಂ ರೆಸಿಡೆನ್ಸಿ, ಸಿ ಬ್ಲಾಕ್, ಗೋಕುಲ, ಬೆಂಗಳೂರು–560054	ಬನ್ನಿಕುಪ್ಪೆ, ರಾಮನಗರ ಜಿಲ್ಲೆ
4	ಶ್ರೀಮತಿ ಹೇಮಾ ಆರ್, 575, ಯು.ವಿ.ಸಿ.ಇ. ಸಾಫ್ಟ್ ಕಾಲೋನಿ, 3ನೇ ಹಂತ, 3ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು	ಹಾರೋಹಳ್ಳಿ ಹೋಬ್ಳಿ, ಕನಕಪುರ, ರಾಮನಗರ ಜಿಲ್ಲೆ.

ಸ್ಕ್ರೀನಿಂಗ್ ಕಮಿಟಿಯ ಶಿಫಾರಸ್ಸಿನಂತೆ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮೇಲಿನ ನಾಲ್ಕು ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಅನುಮೋದಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ : 14–6–2010

ಪ್ರಸ್ತಾವನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009–10ನೇ ಸಾಲಿನಲ್ಲಿ ಅನುಬಂಧ 'ಅ' ರಲ್ಲಿ ವಿವರಿಸಿರುವ ನಾಲ್ಕು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಈ ಕೆಳಕಂಡ ನಿಬಂಧನೆ ಮೇರೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಕೆಬಿಟ್ಸ್ ಸಂಸ್ಥೆಯವರು ಮೇಲೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರದ ಆದೇಶಗಳನ್ವಯ ಹಾಗೂ ಮಾರ್ಗಸೂಚಿಯಂತೆ ಗ್ರಾಮೀಣ ಬಿಪಿಓ ಕೇಂದ್ರಗಳಿಗೆ ಪ್ರಗತಿಗೆ ಅನುಗುಣವಾಗಿ ಕಾಲಕಾಲಕ್ಕೆ ಹಂತಹಂತವಾಗಿ ಹಣ ಬಿಡುಗಡೆ ಮಾಡತಕ್ಕದ್ದು.
2. ಗ್ರಾಮೀಣ ಬಿಪಿಓ ಕಾರ್ಯವೈಖರಿಯನ್ನು ಆಗಿಂದಾಗ್ಗೆ ತಪಾಸಣೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
3. ಬಿಪಿಓ ಕೇಂದ್ರಗಳಿಂದ ವಿನಿಯೋಗಿತ ಪತ್ರಗಳನ್ನು ಪಡೆದು ಸರ್ಕಾರಕ್ಕೆ ಸಕಾಲದಲ್ಲಿ ಸಲ್ಲಿಸತಕ್ಕದ್ದು.
4. ಗ್ರಾಮೀಣ ಬಿಪಿಓ ಕೇಂದ್ರಗಳಿಗೆ ಬಿಡುಗಡೆ ಮಾಡುವ ಹಣ ದುರುಪಯೋಗವಾಗದಂತೆ ಹಾಗೂ ಯೋಜನೆಯ ಅನುಷ್ಠಾನವನ್ನು ಮಧ್ಯದಲ್ಲಿ ರದ್ದುಪಡಿಸಿದರೆ ಸರ್ಕಾರದಿಂದ ನೀಡಲಾದ ಆರ್ಥಿಕ ಸೌಲಭ್ಯವನ್ನು ವಸೂಲಿ ಮಾಡುವ ಬಗ್ಗೆ/ಮೂಲಭೂತ ಸೌಕರ್ಯವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಕರಾರಿನಲ್ಲಿ ಸೂಕ್ತ ನಿಬಂಧನೆಗಳನ್ನು ವಿಧಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಆರ್. ಅನ್ನಪೂರ್ಣ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ 14–6–2010

ಅನುಬಂಧ–ಅ

ಕ್ರಮ ಸಂಖ್ಯೆ	ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ	ಬಿಪಿಓ ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
1	ಅಮಿತ್‌ಸೇನ್ ಎಸ್. ಜಬನ್ನಾವರ್ (ಪಾರ್ಟನರ್), ಫಾಸ್ಟ್ ಬರ್ಕ್ಸ್ ಸರ್ವೀಸಸ್, 126, 1ನೇ ಮಹಡಿ, ಡಿ.ಆರ್. ಟವರ್, ಡಿಸ್ಪೆನ್ಸರಿ ರಸ್ತೆ, ಬೆಂಗಳೂರು	ಸಂಕೇಶ್ವರ, ಬೆಳಗಾವಿ ಜಿಲ್ಲೆ
2	ಕಲ್ಪನಾ ಜಿ. ಕೃಷ್ಣ, ನವೋದಯ ರಾಜೀವ್ ನಗರ, ಪಾರ್ಕ್ ಹತ್ತಿರ, ಚಿಂತಾಮಣಿ	ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ
3	ಅಭಿಷೇಕ್, ಡಿ. ಮಾವಿನಕುರ್ವೆ, 115, ರಘುರಾಂ ರೆಸಿಡೆನ್ಸಿ, ಸಿ ಬ್ಲಾಕ್, ಗೋಕುಲ, ಬೆಂಗಳೂರು–560054	ಬನ್ನಿಕುಪ್ಪೆ, ರಾಮನಗರ ಜಿಲ್ಲೆ
4	ಶ್ರೀಮತಿ ಹೇಮಾ ಆರ್, 575, ಯು.ವಿ.ಸಿ.ಇ. ಸಾಫ್ಟ್ ಕಾಲೋನಿ, 3ನೇ ಹಂತ, 3ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು	ಹಾರೋಹಳ್ಳಿ ಹೋಬ್ಳಿ, ಕನಕಪುರ, ರಾಮನಗರ ಜಿಲ್ಲೆ.

(ಜಿ.ಆರ್. ಅನ್ನಪೂರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1511

ಸಹಕಾರ ಸಚಿವಾಲಯ

ವಿಷಯ : ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಇದರ ವಿಶೇಷಾಧಿಕಾರಿಯವರ ಅವಧಿ ವಿಸ್ತರಿಸುವ ಬಗ್ಗೆ

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಸಿಒ 164 ಸಿಎಲ್‌ಎಂ 2008, ದಿನಾಂಕ : 6–4–2009.
2) ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ : ಸಿಆರ್‌ಡಿ/ಸಿಎಬಿ–1/81/2003–04, ದಿನಾಂಕ : 24–4–2010.

ಪ್ರಸ್ತಾವನೆ :

ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಇದರ ವಿಶೇಷಾಧಿಕಾರಿಯಾ ಕೋಲಾರ ಜಿಲ್ಲಾಧಿಕಾರಿಯನ್ನು ದಿನಾಂಕ 21–8–2004 ರಂದು ನೇಮಿಸಿ ಕಾಲಕಾಲಕ್ಕೆ ವಿಶೇಷಾಧಿಕಾರಿಯವರ ಅವಧಿಯನ್ನು ವಿಸ್ತರಿಸಲಾಗಿದ್ದು ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ದಿನಾಂಕ : 31–3–2010 ರವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ. ಈ ಅವಧಿಯು ಮುಗಿದಿರುವುದರಿಂದ ಬ್ಯಾಂಕಿನ 2010–11 ಮತ್ತು 2011–12 ಸಾಲುಗಳಿಗೆ ಕ್ರಿಯಾ ಯೋಜನೆಗಳನ್ನು ತಯಾರಿಸಿ ಅನುಮೋದಿಸಿ ನಬಾರ್ಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಲಾಗಿದೆ ಎಂದೂ ಸದರಿ ಕ್ರಿಯಾ ಯೋಜನೆಯನ್ವಯ ಬ್ಯಾಂಕಿನಲ್ಲಿ ಆರ್ಥಿಕ ಸುಧಾರಣೆ ತುರ್ತು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಬ್ಯಾಂಕಿನ ಕೋರಿಕೆಯಂತೆ ವಿಶೇಷಾಧಿಕಾರಿಯವರ ಅವಧಿಯನ್ನು ಮುಂದಿನ 6 ತಿಂಗಳ ಅವಧಿಗೆ ಅಂದರೆ ದಿನಾಂಕ : 1–4–2010 ರಿಂದ ದಿನಾಂಕ 30–9–2010ರ ವರೆಗೆ ವಿಸ್ತರಿಸಲು ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಒ 82 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 7–6–2010

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 31(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಕೋಲಾರ ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ, ಎಂದರೆ :–

***31ರ ಪ್ರಕರಣದಲ್ಲಿ :**

(1)ನೇ ಉಪಪ್ರಕರಣದಲ್ಲಿರುವ **"ಒಂದು ವರ್ಷ"** ಎಂಬ ಪದಗಳಿಗೆ ಬದಲಾಗಿ **"ಅರವತ್ತೆಂಟು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ : ಪ್ರಕರಣ 31 ಉಪ-ಪ್ರಕರಣ (1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30-9-2010 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 31 ಉಪ-ಪ್ರಕರಣ (1) ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1512

(ಆರ್.ಎಸ್. ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕಿನ ತೆವರಮೆಳ್ಳಿಹಳ್ಳಿ ಸಣ್ಣ ನೀರಾವರಿ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ತೀರ್ಪಿನ ಅನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ಹಣ ಬಿಡುಗಡೆ ಕುರಿತು.

ಓದಲಾಗಿದೆ :
1. ದಿನಾಂಕ : 9-4-2010 ರ ಮುಖ್ಯ ಇಂಜಿನಿಯರ್, ಸಣ್ಣ ನೀವಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/2455.
2. ದಿನಾಂಕ : 9-4-10ರ ಸವಣೂರ ಉಪವಿಭಾಗಾಧಿಕಾರಿಯವರ ಪತ್ರ ಸಂಖ್ಯೆ : ಎಲ್ಎಕ್ಯೂ/ಸಿಆರ್-1/78

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕಿನ ತವರಮೆಳ್ಳಿಹಳ್ಳಿ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಕುಂದೂರ ಗ್ರಾಮದ ಸ.ನಂ. 81/2ಸಿ ರ 2 ಎಕರೆ 10 ಗುಂಟೆ ಜಮೀನಿಗೆ ಹಾವೇರಿಯ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ನೀಡಿದ ಆದೇಶದಂತೆ ಭೂಮಾಲೀಕರಿಗೆ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 1,16,883-00ಗಳನ್ನು ಬಿಡುಗಡೆ ಮಾಡುವಂತೆ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸಣ್ಣ ನೀರಾವರಿ ಮುಖ್ಯ ಇಂಜಿನಿಯರ್‌ರವರು ಕೋರಿದ್ದಾರೆ.

ನ್ಯಾಯಾಲಯ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಜಮೀನಿನ ಸ್ವಾಧೀನಕ್ಕೆ ಭೂಸ್ವಾಧೀನ ಕಾಯ್ದೆಯಡಿ 4(1)ರ ಅಧಿಸೂಚನೆಯನ್ನು ದಿನಾಂಕ 31-5-79 ರಂದು ಮತ್ತು ಪರಿಹಾರ ಧನದ ಐತೀರ್ಪನ್ನು ದಿನಾಂಕ 8-1-81 ರಂದು ಹೊರಡಿಸಲಾಗಿದೆ. ಪರಿಹಾರದ ಧನದ ಐತೀರ್ಪಿನಂತೆ ಪರಿಹಾರ ಧನ ಪಡೆದ ಭೂಮಾಲೀಕರು ಹೆಚ್ಚಿನ ಪರಿಹಾರ ಧನ ನೀಡುವಂತೆ ಭೂಸ್ವಾಧೀನ ಕಾಯ್ದೆ 18(1)ರನ್ವಯ ಹಾವೇರಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದ ಎಲ್.ಎ.ಸಿ. ಸಂಖ್ಯೆ : 60/81ರಲ್ಲಿ ನ್ಯಾಯಾಲಯವು ಪ್ರತಿ ಎಕರೆಗೆ ರೂ. 9,150/-ಗಳಂತೆ ಭೂಮೌಲ್ಯವನ್ನು ಹೆಚ್ಚಿಸಿ ಈ ಮೊತ್ತದ ಮೇಲೆ ಶೇ 30 ರಷ್ಟು ಸೊಲೇಷಿಯಂ, ಶೇ 12 ರಷ್ಟು ಹೆಚ್ಚುವರಿ ಮಾರುಕಟ್ಟೆ ದರವನ್ನು 4(1)ರ ಅಧಿಸೂಚನೆ ದಿನಾಂಕದಿಂದ ಐತೀರ್ಪಿನ ದಿನಾಂಕದವರೆಗೆ ಹಾಗೂ ಈ ಹೆಚ್ಚುವರಿ ಪರಿಹಾರ ಧನದ ಮೇಲೆ ಬಡ್ಡಿಯನ್ನು ಕಬ್ಜೆ ದಿನಾಂಕದಿಂದ ಮೊದಲನೆ ವರ್ಷಕ್ಕೆ ಶೇ 9 ರಂತೆ ನಂತರದ ಅವಧಿಗೆ ಶೇ. 15 ರಂತೆ ಪಾವತಿಸಲು ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಧಾರವಾಡ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ ಸಂಖ್ಯೆ 133/89ನ್ನು ದಾಖಲಿಸಲಾಗಿದ್ದು, ಮಾನ್ಯ ನ್ಯಾಯಾಲಯವು ಹಾವೇರಿ ಸಿವಿಲ್ ನ್ಯಾಯಾಲಯದ ಆದೇಶವನ್ನು ಸ್ಥಿರೀಕರಿಸಿದೆ. ಈ ಮಧ್ಯೆ ಸಿವಿಲ್ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸದಿರುವ ಹಿನ್ನೆಲೆಯಲ್ಲಿ ಜಮೀನಿನ ಭೂಮಾಲೀಕರು ಹಾವೇರಿ ಸಿವಿಲ್ ನ್ಯಾಯಾಲಯದಲ್ಲಿ ಜಾರಿ ದಾವೆ ಸಂಖ್ಯೆ 20/99ನ್ನು ದಾಖಲಿಸಿದ್ದು, ಸವಣೂರು ಉಪ ವಿಭಾಗಾಧಿಕಾರಿಯವರ ಕಾರ್ಯಾಲಯದ ಪೀಠೋಪಕರಣಗಳನ್ನು ಜಪ್ತಿ ಮಾಡಲು ಆದೇಶ ಹೊರಡಿಸಿರುವುದರಿಂದ ಪ್ರಕರಣದಲ್ಲಿ ಪಾವತಿಸಬೇಕಾದ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡುವಂತೆ ಸವಣೂರು ಉಪ ವಿಭಾಗಾಧಿಕಾರಿಯವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 57 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 11ನೇ ಜೂನ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲ್ಲೂಕಿನ ತವರಮೆಳ್ಳಿಹಳ್ಳಿ ಕೆರೆಗಾಗಿ ಸ್ವಾಧೀನಪಡಿಸಿ ಕೊಳ್ಳಲಾಗಿದ್ದ ಕುಂದೂರ ಗ್ರಾಮದ ಸ.ನಂ. 81/2ಸಿ ರ 2 ಎಕರೆ 10 ಗುಂಟೆ ಜಮೀನಿಗೆ ಹಾವೇರಿಯ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ/ಜಾರಿದಾವೆ ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಪರಿಹಾರ ಧನದ ಮೊತ್ತ ರೂ. 1,16,883–00 ಗಳನ್ನು (ಒಂದು ಲಕ್ಷದ ಹದಿನಾರು ಸಾವಿರದ ಎಂಟುನೂರ ಎಂಭತ್ಮೂರು ರೂಪಾಯಿಗಳು ಮಾತ್ರ) ನ್ಯಾಯಾಲಯದಲ್ಲಿ ಠೇವಣಿ ಮಾಡುವ ಸಲುವಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–5–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1513

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ
(ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಮನಗರ ಜಿಲ್ಲೆ ಹಾಗೂ ತಾಲ್ಲೂಕು ಕೈಲಂಚ ಹೋಬಳಿ ಅಚ್ಚಲು ಫಾರೆಸ್ಟ್‌ನಲ್ಲಿ ಅಚ್ಚಲು ಹೊಸಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 26–6–2008 ರ ಪತ್ರ ಸಂಖ್ಯೆ : ಮುಸನೀ(ದ)/ಲೆಶಾ/ಲೆಸ1/3/ಭೂಸ್ವಾಧೀನ/2008–09/1395

ಪ್ರಸ್ತಾವನೆ :

ಮೇಲೆ ಓದಲಾದ ಬೆಂಗಳೂರು ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ರಾಮನಗರ ಜಿಲ್ಲೆ ಮತ್ತು ತಾಲ್ಲೂಕು ಕೈಲಂಚ ಹೋಬಳಿ ಅಚ್ಚಲು ಫಾರೆಸ್ಟ್‌ನಲ್ಲಿ ಅಚ್ಚಲು ಹೊಸಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಚ್ಚಲು ಗ್ರಾಮದ ಸರ್ವೆ ನಂಬರ್‌ಗಳ ಜಮೀನುಗಳಿಗೆ ರಾಮನಗರದ ಹೆಚ್ಚುವರಿ ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಲಾಗಿದೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನಿನ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 30–10–97
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 19–8–99.

ಭೂಸ್ವಾಧೀನಕ್ಕೊಳಪಟ್ಟ ಜಮೀನಿನ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಮನಗರದ ಹೆಚ್ಚುವರಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 628 ಎಲ್‌ಎಸಿ (ಎಲ್‌ಸಿ) 2007, ದಿನಾಂಕ 31–12–07ರಲ್ಲಿ ಅಭಿಪ್ರಾಯ ನೀಡಿದೆ. ಪಾವತಿಸಬೇಕಾದ ಪ್ರಕರಣಗಳ ವಿವರ ಕೆಳಕಂಡಂತಿದೆ :

ಎಲ್‌ಎಸಿ ಸಂಖ್ಯೆ	ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
5, 6, 7/2000	1/91, 1/94, 1/93, 4/99	2–27	11,13,011–00
ಒಟ್ಟು			11,13,011–00

*ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 78 ಭೂಸ್ವಾಪ್ರ 2008, ಬೆಂಗಳೂರು, ದಿನಾಂಕ : 11ನೇ ಜೂನ್ 2010

ರಾಮನಗರ ಜಿಲ್ಲೆ ಹಾಗೂ ತಾಲ್ಲೂಕು ಕೈಲಂಚ ಹೋಬಳಿ ಅಚ್ಚಲು ಫಾರಸ್ಟ್‌ನಲ್ಲಿ ಅಚ್ಚಲು ಹೊಸಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಚ್ಚಲು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 11,13,011–00ಗಳನ್ನು (ಹನ್ನೊಂದು ಲಕ್ಷದ ಹದಿಮೂರು ಸಾವಿರದ ಹನ್ನೊಂದು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ " 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–5–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1514

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ
(ಸಣ್ಣ ನೀರಾವರಿ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶಾಖೆ ತೆರೆಯುವ ಬಗ್ಗೆ.

ಓದಲಾಗಿದೆ : **1.** 2010–11 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯದ ಭಾಷಣ.

2. ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ : PER/Cab-2:D-2:150/2010, ದಿನಾಂಕ : 6–4–2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರಲ್ಲಿ, ಮಾನ್ಯ ಮುಖ್ಯಮಂತ್ರಿಗಳು 2010–11 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸಲು ಕಿದ್ವಾಯಿ ಆಸ್ಪತ್ರೆಯ ಶಾಖೆಯನ್ನು ತೆರೆಯಲು ಘೋಷಿಸಿರುತ್ತಾರೆ.

ಅದರಂತೆ, ಮೇಲೆ ಓದಲಾದ ಕ್ರ.ಸಂ. (2)ರ ಪತ್ರದಲ್ಲಿ, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು ಇವರು 2010–11 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸಲು ಕಿದ್ವಾಯಿ ಸಂಸ್ಥೆಯ ಶಾಖೆಯನ್ನು ರೂ. 5,02,54,800/–ಗಳ ವೆಚ್ಚದಲ್ಲಿ ತೆರೆಯಲು ಹಾಗೂ ಅನುದಾನವನ್ನು ಒದಗಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 87 ಪಿಟಿಡಿ 2010, ಬೆಂಗಳೂರು, ದಿನಾಂಕ : 9–6–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010–11ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ರೂ. 5.03 ಕೋಟಿ (ಐದು ಕೋಟಿ ಮೂರು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚದ ಅಂದಾಜಿನಲ್ಲಿ ಕಿದ್ವಾಯಿ ಸಂಸ್ಥೆಯ ಶಾಖೆ ತೆರೆಯಲು ಅನುದಾನವನ್ನು ಒದಗಿಸುತ್ತಾ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಇದಕ್ಕೆ ತಗಲುವ ವೆಚ್ಚವನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಲೆಕ್ಕ ಶೀರ್ಷಿಕೆ 2210–05–105–1–06 (ಯೋಜನೆ) ಅಡಿ ಒದಗಿಸಿರುವ ರೂ. 1000.00 ಲಕ್ಷ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಆಕುಕ 425 ಆಂಆಸ 2010, ದಿನಾಂಕ : 1–4–2010, ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ : ಯೋಇ/29/ಜಶ/2010, ದಿನಾಂಕ 19–4–2010 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 613 ವೆಚ್ಚ–5/2010, ದಿನಾಂಕ : 28–4–2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 1515

(ಆರ್.ಎಸ್. ಇಟಗಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾರತೀಯ ವೈದ್ಯ ಪದ್ಧತಿ).

ಸಹಕಾರ ಸಚಿವಾಲಯ

ವಿಷಯ : ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ : 30–09–2010 ರೊಳಗಾಗಿ ಜರುಗಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಡಿಎಸ್‌ಕೆ/ಇಎಸ್‌ಟಿಎಸ್/ಎಜಿಎಂ/366/2009–10 ದಿನಾಂಕ : 23–03–2010

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 23–03–2010ರ ಪತ್ರದಲ್ಲಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ : 30–09–2010ರೊಳಗಾಗಿ ನಡೆಸುವಂತೆ ಈ ಕಛೇರಿಯ ದಿನಾಂಕ : 22–09–2009ರ ಪತ್ರದಲ್ಲಿ ಅನುಮತಿ ನೀಡಿದ್ದು, ಸದರಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಕಾರ್ಖಾನೆಯ ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಖಾನೆಯ ಸಿಬ್ಬಂದಿ ಲೇ–ಆಫ್‌ನಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುವ ಕೆಲವೇ ಕೆಲವು ಅವಶ್ಯ ಸಿಬ್ಬಂದಿ ಕೂಡ ಟೆಂಡರ್ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂದು ಕಾರ್ಖಾನೆಯ 2006–07, 2007–08 ಹಾಗೂ 2008–09ನೇ ಸಾಲಿನ ಲೆಕ್ಕ ಪರಿಶೋಧನಾ ಕಾರ್ಯವು ಅಂತಿಮ ಹಂತದಲ್ಲಿರುವುದಾಗಿ ಹಾಗೂ ಮಹಾ ಸಭೆಯ ಖರ್ಚು ಅಂದಾಜು ರೂ. 90,000–00 ಗಳನ್ನು ಭರಿಸಲು ಸಂಪನ್ಮೂಲಗಳ ಕೊರತೆಯಿಂದಾಗಿ ಕಾರ್ಖಾನೆಯ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ದಿನಾಂಕ : 18–01–2010 ರಂದು ಸಭೆ ನಡೆಸಿ, ಪರಿಶೀಲಿಸಿ ಕಾರ್ಖಾನೆಯ ಗುತ್ತಿಗೆ ಪ್ರಕ್ರಿಯೆಯು ಮುಗಿಯುವವರೆಗೆ ಕಾರ್ಖಾನೆಯ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಅನುಮತಿ ನೀಡಬೇಕೆಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಮುಖಾಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ವರದಿ ಮಾಡಿರುತ್ತಾರೆ.

ಕಾರ್ಖಾನೆಯನ್ನು ಗುತ್ತಿಗೆ ನೀಡಲು ಟೆಂಡರ್ ಪ್ರಕ್ರಿಯೆ ಆರಂಭಿಸಿದ್ದು, ಸಲ್ಲಿಸಲಾದ ಟೆಂಡರ್‌ಗಳನ್ನು ತೆಗೆಯಲಾಗಿದೆ. ಗುತ್ತಿಗೆ ನೀಡುವ ವಿಷಯದಲ್ಲಿ ಸರ್ಕಾರದ ಅಂತಿಮ ನಿರ್ಧಾರ ನಿರೀಕ್ಷಿಸಿ, ಸರ್ಕಾರದ ಅನುಮತಿಯ ನಂತರ, ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಇತ್ಯಾದಿ ಕೆಲಸಗಳನ್ನು ಆದ್ಯತೆಯ ಮೇರೆಗೆ ನಿರ್ವಹಿಸಲಾಗಿರುವ ಹಿನ್ನೆಲೆಯಲ್ಲಿ ಕಾರ್ಖಾನೆಯ ಸರ್ವ ಸದಸ್ಯರ ಸಭೆ ನಡೆಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121 ರನ್ವಯ

ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರ ಚಲಾಯಿಸಿ, ಕಲಂ 27(1) ರನ್ವಯ 2008–09 ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ : 30–09–2010ರ ಒಳಗೆ ನಡೆಸಲು ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 07 ಸಸಕಾ 2010, ಬೆಂಗಳೂರು, ದಿನಾಂಕ : 02ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ 2008–09 ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ : 30–09–2010 ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪ ಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30–09–2010ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1) ರ ಕಲಂನ ಉಪ ಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ನಂಜುಂಡಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಹಕಾರ ಇಲಾಖೆ

ಪಿ.ಆರ್. 1525

ಒಳಾಡಳಿತ ಸಚಿವಾಲಯ

ವಿಷಯ : ಗುಲ್ಬರ್ಗಾ ಕೇಂದ್ರ ಕಾರಾಗೃಹಕ್ಕೆ ಸಲಹಾ ಮಂಡಳಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರ ಪತ್ರ ಸಂಖ್ಯೆ : ಜೆ2/ಸಿಆರ್–63/2004 ದಿನಾಂಕ : 17–10–2008 ಮತ್ತು 6–04–2009.

ಪ್ರಸ್ತಾವನೆ :

1974ನೇ ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 192ರ ನಿಯಮದಲ್ಲಿ ಪ್ರತಿ ಕೇಂದ್ರ ಕಾರಾಗೃಹಕ್ಕಾಗಿ ಸಲಹಾ ಮಂಡಳಿಯನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುತ್ತದೆ. ದೀರ್ಘಾವಧಿ ಶಿಕ್ಷೆಗೊಳಪಟ್ಟ ಅಪರಾಧಿಗಳನ್ನು ವಿಮರ್ಶಿಸುವುದು ಈ ಮಂಡಳಿಯ ಉದ್ದೇಶವಾಗಿರುತ್ತದೆ.

ಈ ಸಲಹಾ ಮಂಡಳಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದಾಗಿರುತ್ತದೆ :–

ಆಯಾ ಜಿಲ್ಲೆಯ

1)	ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು	ಅಧ್ಯಕ್ಷರು
2)	ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು	ಸದಸ್ಯರು
3)	ಪೊಲೀಸ್ ಅಧೀಕ್ಷಕರು	ಸದಸ್ಯರು
4)	ಜಿಲ್ಲಾ ಶಸ್ತ್ರ ಚಿಕಿತ್ಸಕರು	ಸದಸ್ಯರು
5)	ಮೂರು ಜನ ಸ್ಥಳೀಯ ಅಧಿಕಾರೇತರರು	ಸದಸ್ಯರು
6)	ಕೇಂದ್ರ ಕಾರಾಗೃಹದ ಅಧೀಕ್ಷಕರು	ಕಾರ್ಯದರ್ಶಿ

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರವರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ, ಮೇಲೆ ಹೇಳಲಾದ ನಿಯಮವನ್ನು ಪ್ರಸ್ತಾಪಿಸಿ, 3 ಜನ ಸ್ಥಳೀಯ ಅಧಿಕಾರೇತರರ ಸದಸ್ಯರನ್ನು ತಿಳಿಸುತ್ತಾ, ಗುಲ್ಬರ್ಗಾ ಕೇಂದ್ರ ಕಾರಾಗೃಹಕ್ಕೆ ಸಲಹಾ ಮಂಡಳಿಯನ್ನು ರಚಿಸುವಂತೆ ಕೋರಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 258 ಪಿಆರ್ಎ 2008 ಬೆಂಗಳೂರು, ದಿನಾಂಕ : 2ನೇ ಜೂನ್, 2010

ಗುಲ್ಬರ್ಗಾ ಕೇಂದ್ರ ಕಾರಾಗೃಹದಲ್ಲಿ ದೀರ್ಘಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಗಳನ್ನು ವಿಮರ್ಶಿಸುವ ಸಲುವಾಗಿ, 1974ನೇ ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 192ನೇ ನಿಯಮದ ಅನ್ವಯ ಸರ್ಕಾರವು ಗುಲ್ಬರ್ಗಾ

ಕೇಂದ್ರ ಕಾರಾಗೃಹಕ್ಕೆ ಈ ಕೆಳಕಂಡಂತೆ ಸಲಹಾ ಮಂಡಳಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಿದೆ :–

1)	ಗುಲ್ಬರ್ಗಾ ಜಿಲ್ಲೆಯ ಜಿಲ್ಲಾಧಿಕಾರಿಗಳು	ಅಧ್ಯಕ್ಷರು
2)	ಗುಲ್ಬರ್ಗಾ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು	ಸದಸ್ಯರು
3)	ಗುಲ್ಬರ್ಗಾ ಜಿಲ್ಲೆಯ ಪೊಲೀಸ್ ಅಧೀಕ್ಷಕರು	ಸದಸ್ಯರು
4)	ಗುಲ್ಬರ್ಗಾ ಜಿಲ್ಲಾ ಶಸ್ತ್ರ ಚಿಕಿತ್ಸಕರು	ಸದಸ್ಯರು
5)	ಶ್ರೀ ಕಿಶೋರ ಚವಾಣ, ಗುಲ್ಬರ್ಗಾ	ಸದಸ್ಯರು*
6)	ಶ್ರೀ ಗಂಗಾ ಭೀಷಣ ಸೋಮಾಣಿ, ಗುಲ್ಬರ್ಗಾ	ಸದಸ್ಯರು*
7)	ಶ್ರೀ ಬಸವರಾಜ ಹಾಲಪ್ಪಗೋಳ, ಗುಲ್ಬರ್ಗಾ	ಸದಸ್ಯರು*
8)	ಗುಲ್ಬರ್ಗಾ ಕೇಂದ್ರ ಕಾರಾಗೃಹದ ಅಧೀಕ್ಷಕರು	ಕಾರ್ಯದರ್ಶಿ

ಅಧಿಕಾರೇತರ ಸದಸ್ಯರ* ಅವಧಿಯು ಮೂರು ವರ್ಷಗಳಿಗೆ ಅಥವಾ ತತ್ಸಬಂಧ ಸರ್ಕಾರವು ಮುಂದೆ ಹೊರಡಿಸಬಹುದಾದ ಆದೇಶದವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

ಈ ಸಲಹಾ ಮಂಡಳಿಯು 1974ನೇ ಕರ್ನಾಟಕ ಕಾರಾಗೃಹಗಳ ನಿಯಮಾವಳಿಗಳ 193ರ ನಿಯಮದಲ್ಲಿ ತಿಳಿಸಿರುವಂತೆ ತನ್ನ ಕಾರ್ಯವನ್ನು ನಿರ್ವಹಿಸತಕ್ಕದ್ದಾಗಿರುತ್ತದೆ.

ಈ ಸಲಹಾ ಮಂಡಳಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಎಸ್‌ಆರ್‌ಎ 2000 ದಿನಾಂಕ : 3–2–2001ರಲ್ಲಿ ಹೊರಡಿಸಿದ ನಿಯಮಗಳನ್ವಯ ಹಾಗೂ ಸದರಿ ನಿಯಮಗಳಲ್ಲಿ ತಿಳಿಸಲಾಗಿರುವ ಷರತ್ತುಗಳಿಗೆ ಬದ್ಧವಾಗಿ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 1526

ಸಾರಿಗೆ ಸಚಿವಾಲಯ

ಅಧಿಸೂಚನೆ

ಸಂಸಾರಿಇ 105 ಸಾಇಸೇ 2009, ಬೆಂಗಳೂರು, ದಿನಾಂಕ : 03–06–2010

ಕೇಂದ್ರ ಸರ್ಕಾರದ ಭೂ–ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಅಧಿಸೂಚನೆ ಸಂಖ್ಯೆ : S.O. 444 (E) ದಿನಾಂಕ : 12–06–1989 ಹಾಗೂ ಅಧಿಸೂಚನೆ ಸಂಖ್ಯೆ : S.O. 1705 ದಿನಾಂಕ : 12–06–1989ರ ಅನ್ವಯ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಅಂಕಣ (3) ರಲ್ಲಿ ನಮೂದಿಸಿರುವ ಪ್ರಕಾರ ನೋಂದಣಿ ಸೂಚಿ ಸಂಖ್ಯೆಯನ್ನು ಅಂಕಣ (2) ರಲ್ಲಿ ತಿಳಿಸಿದ ನೋಂದಣಿ ಪ್ರಾಧಿಕಾರಕ್ಕೆ ಕರ್ನಾಟಕ ರಾಜ್ಯದಲ್ಲಿ ನೋಂದಣಿ ಸೂಚಿ ಸಂಖ್ಯೆಯಾಗಿ ಉಪಯೋಗಿಸಲು ಹಂಚಿಕೆ ಮಾಡಲಾಗಿದೆ. ಈ ಅಧಿಸೂಚನೆಯು ತಕ್ಷಣದಿಂದಲೇ ಜಾರಿಗೆ ಬರುತ್ತದೆ.

ಕ್ರ.ಸಂ.	ನೋಂದಣಿ ಪ್ರಾಧಿಕಾರ	ನೋಂದಣಿ ಸೂಚಿ ಸಂಖ್ಯೆ
1	2	3
1.	ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ಬಸವಕಲ್ಯಾಣ, ಬೀದರ್ ಜಿಲ್ಲೆ.	56

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಬಿ. ರಘುನಾಥ್

ಪೀಠಾಧಿಕಾರಿ

ಸಾರಿಗೆ ಇಲಾಖೆ

ಪಿ.ಆರ್. 1527

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಚವಿ 2008, ದಿನಾಂಕ : 26–09–2009

2) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ : 24–10–2009

3) ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ : 11–03–2010

4) ವ್ಯವಸ್ಥಾಪಕ ನಿರ್ದೇಶಕರು ಕೆಬಿಟ್ಸ್ ಹಾಗೂ ಅಧ್ಯಕ್ಷರು, ಬಿಪಿಓ ಸ್ಕ್ರೀನಿಂಗ್ ಕಮಿಟಿ ಇವರ ಪತ್ರದ ಸಂಖ್ಯೆ : ಕೆಬಿಟ್ಸ್/ಕೈ.ಉ.ಅ/ಗ್ರಾ ಬಿಪಿಓ/22/2009–10, ದಿನಾಂಕ : 28–04–2010.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ : 26–09–2009ರ ಆದೇಶದಲ್ಲಿ ಸ್ಕ್ರೀನಿಂಗ್ ಕಮಿಟಿಯ ಶಿಫಾರಸ್ಸಿನಂತೆ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ 8 ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ 24–10–2009ರ ಆದೇಶದಲ್ಲಿ ಸ್ಕ್ರೀನಿಂಗ್ ಕಮಿಟಿಯ ಶಿಫಾರಸ್ಸಿನಂತೆ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ 8 ಅಭ್ಯರ್ಥಿಗಳ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ : 11–03–2010ರ ಸರ್ಕಾರಿ ಆದೇಶದನ್ವಯ ಗ್ರಾಮೀಣ ಬಿಪಿಓ ಘಟಕವು ಕನಿಷ್ಠ 100 ಉದ್ಯೋಗಿಗಳೊಂದಿಗೆ ಕರಾರನ್ನು ಸಹಿ ಮಾಡಿದ 3 ತಿಂಗಳ ಒಳಗಾಗಿ ತನ್ನ ಕಾರ್ಯವನ್ನು ಪ್ರಾರಂಭಿಸಬೇಕಿದೆ, ತಪ್ಪಿದ್ದಲ್ಲಿ ಆದೇಶವು ರದ್ದಾಗುತ್ತದೆ.

ಮೇಲೆ (4) ರಲ್ಲಿ ಓದಲಾದ ಕೆಬಿಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧ್ಯಕ್ಷರು, ಬಿಪಿಓ ಸ್ಕ್ರೀನಿಂಗ್ ಕಮಿಟಿ ಇವರ ದಿನಾಂಕ 28–04–2010ರ ಪತ್ರದಲ್ಲಿ ಸ್ಕ್ರೀನಿಂಗ್ ಕಮಿಟಿಯ ಶಿಫಾರಸ್ಸಿನಂತೆ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಗಳನ್ನು ಅನುಮೋದಿಸಲ್ಪಟ್ಟ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ 26–09–2009ರ ಅನುಬಂಧದಲ್ಲಿನ ಕ್ರಮ ಸಂಖ್ಯೆ 5 ಮತ್ತು 6 ರಲ್ಲಿನ ಹಾಗೂ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ 24–10–2009ರ ಅನುಬಂಧದಲ್ಲಿನ ಕ್ರಮ ಸಂಖ್ಯೆ 8ರಲ್ಲಿನ ಈ ಕೆಳಕಂಡ ಅಭ್ಯರ್ಥಿಗಳು ಗ್ರಾಮೀಣ ಬಿಪಿಓ ಘಟಕಗಳನ್ನು 3 ತಿಂಗಳೊಳಗಾಗಿ ಕರಾರಿನಂತೆ ತೆರೆದಿಲ್ಲದಿರುವ ಕಾರಣ ಹಾಗೂ ಕೆಬಿಟ್ಸ್ ಸಂಸ್ಥೆಯ ವತಿಯಿಂದ ಕೇಂದ್ರಗಳನ್ನು ತೆರೆಯಲು ಸೂಕ್ತ ನಿರ್ದೇಶನವನ್ನು ನೀಡಲಾಗಿದ್ದಾಗ್ಯೂ ಸಹ ಸಂಬಂಧಪಟ್ಟ ಅಭ್ಯರ್ಥಿಗಳು ಘಟಕಗಳನ್ನು ತೆರೆಯುವ ಬಗ್ಗೆ ಯಾವುದೇ ಕ್ರಮ ಹಾಗೂ ಆಸಕ್ತಿ ತೋರದೆ ಇರುವ ಕಾರಣ ಸದರಿ ಗ್ರಾಮೀಣ ಘಟಕಗಳನ್ನು ರದ್ದುಪಡಿಸಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

1	ಸಚ್ಚಿದಾನಂದ ಪಿ. ಕಿಣಿ, ಯುನಿಸಾಫ್ಟ್ ಇನ್ಫೊಟೆಕ್ ಪ್ರೈ. ಲಿಮಿಟೆಡ್, ನಂ. 701, ನಾರ್ಥ್ ಬ್ಲಾಕ್, ಫ್ರಂಟ್‌ವಿಂಗ್, 7ನೇ ಮಹಡಿ, 47, ಮಣಿಪಾಲ್ ಸೆಂಟರ್, ಡಿಕನ್‌ಸನ್ ರೋಡ್, ಬೆಂಗಳೂರು–42.	ಹೊಸದುರ್ಗ, ಚಿತ್ರದುರ್ಗ ಜಿಲ್ಲೆ
2	ಉಮೇಶ್ ಎ ನಾಗರಹಳ್ಳಿ & ಶಿವಕುಮಾರ್ ಗೌಡ ಎಸ್. ಪಾಟೀಲ್, ಅಂಬಾಭವಾನಿ ನಗರ, ಹೊಸ ಬಸ್‌ಸ್ಟ್ಯಾಂಡ್ ಹತ್ತಿರ, ಮುಂಡರಗಿ, ಗದಗ ಜಿಲ್ಲೆ.	ಮುಂಡರಗಿ ಗದಗ ಜಿಲ್ಲೆ
3	ಶ್ರೀಮತಿ ಅಶ್ವಿನಿ ಎಸ್. ಕುಮಾರ್, ಮೆ: ಗ್ಲೋಪೋರ್ ಐ:ಎಮ್ ಸರ್ವೀಸಸ್ ಪ್ರೈ. ಲಿ, ನಂ. 85, 4ನೇ "ಎ" ಕ್ರಾಸ್, 36ನೇ ಮೇನ್, ಬಿಟಿಎಂ 1ನೇ ಹಂತ, ಡಾಲರ್ಸ್ ಸ್ಕೀಮ್, ಬೆಂಗಳೂರು–560068	ಶಂಕರಘಟ್ಟ, ಚಿಕ್ಕಮಗಳೂರು ಜಿಲ್ಲೆ

ಸದರಿ ಸಂದರ್ಭದಲ್ಲಿ ಮೇಲೆ ಉಲ್ಲೇಖಿಸಿರುವ ಗ್ರಾಮೀಣ ಬಿಪಿಓ ಕೇಂದ್ರಗಳ ಅನುಮೋದನೆಯನ್ನು ರದ್ದುಗೊಳಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ : 09–06–2010

ಪ್ರಸ್ತಾವನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ : 26–09–2009ರ ಅನುಬಂಧದಲ್ಲಿನ ಕ್ರಮ ಸಂಖ್ಯೆ 5 ಮತ್ತು 6 ರಲ್ಲಿನ ಹಾಗೂ ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ 24–10–2009ರ ಅನುಬಂಧದಲ್ಲಿನ ಕ್ರಮ ಸಂಖ್ಯೆ 8 ರಲ್ಲಿನ ಈ ಕೆಳಕಂಡ ಅಭ್ಯರ್ಥಿಗಳು ಗ್ರಾಮೀಣ ಬಿಪಿಓ ಕೇಂದ್ರಗಳನ್ನು ತೆರೆಯಲು ಅನುಮೋದಿಸಿದ್ದನ್ನು ರದ್ದುಪಡಿಸಲಾಗಿದೆ :–

1	ಸಚ್ಚಿದಾನಂದ ಪಿ. ಕಿಣಿ, ಯುನಿಸಾಫ್ಟ್ ಇನ್ಫೊಟೆಕ್ ಪ್ರೈ. ಲಿಮಿಟೆಡ್, ನಂ. 701, ನಾರ್ಥ್ ಬ್ಲಾಕ್, ಫ್ರಂಟ್‌ವಿಂಗ್, 7ನೇ ಮಹಡಿ, 47, ಮಣಿಪಾಲ್ ಸೆಂಟರ್, ಡಿಕೆನ್ಸನ್ ರೋಡ್, ಬೆಂಗಳೂರು–42.	ಹೊಸದುರ್ಗ, ಚಿತ್ರದುರ್ಗ ಜಿಲ್ಲೆ
2	ಉಮೇಶ್ ಎ ನಾಗರಹಳ್ಳಿ & ಶಿವಕುಮಾರ್ ಗೌಡ ಎಸ್. ಪಾಟೀಲ್, ಅಂಬಾಭವಾನಿ ನಗರ, ಹೊಸ ಬಸ್‌ಸ್ಟ್ಯಾಂಡ್ ಹತ್ತಿರ, ಮುಂಡರಗಿ, ಗದಗ ಜಿಲ್ಲೆ.	ಮುಂಡರಗಿ ಗದಗ ಜಿಲ್ಲೆ
3	ಶ್ರೀಮತಿ ಅಶ್ವಿನಿ ಎಸ್. ಕುಮಾರ್, ಮೆ: ಗ್ಲೋಪೋರ್ ಐ.ಎಮ್ ಸರ್ವೀಸಸ್ ಪ್ರೈ. ಲಿ, ನಂ. 85, 4ನೇ "ಎ" ಕ್ರಾಸ್, 36ನೇ ಮೇನ್, ಬಿಟಿಎಂ 1ನೇ ಹಂತ, ಡಾಲರ್ಸ್ ಸ್ಕೀಮ್, ಬೆಂಗಳೂರು–560068	ಶಂಕರಘಟ್ಟ, ಚಿಕ್ಕಮಗಳೂರು ಜಿಲ್ಲೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1528

COMMERCE & INDUSTRIES SECRETARIAT

Sub :- Change of name of Company from M/s Bramhani Industries Ltd., to M/s Bramhani Industries Karnataka Ltd.,

Read :- 1. Govt. Order No : CI 122 SPI 2010, dated : 26-04-2010.

2. Proceedings of the 22nd State High Level Clearance Committee (SHLCC) meeting held on 24-05-2010.

Preamble:

The Proposal of M/s. Bramhani Industries Ltd., to establish a "6 Million MTPA Integrated Steel Plant with Captive Power Generation" in two phases with an investment of Rs. 36,000 crores, generating employment to about 25000 persons in the special industrial Zone to be set up by vijayanagara Area Development Authority (VADA) in Bellary District. The company has proposed to establish 1.9 Million MTPA Steel and 68 MW Captive Power Plant in the first Phase, was approved in the 21st State High Level Clearance Committee (SHLCC) meeting, held on 29-03-2010, and G.O. read at (1) above has been issued.

In the 22nd State High Level clarance Committee (SHLCC) Meeting held on 24-05-2010, the committee approved request of the company for change in name from M/s Bramhani Industries Ltd., to M/s Bramhani Industries Karnataka Ltd.

Hence the following order.

Government Order No . CI 122 SPI 2010, Bangalore Dated : 10-06-2010

Government is pleased to accord approval to the change of company name from M/s. Bramhani Industries Ltd., to M/s Bramhani Industries Karnataka Ltd., to establish a "6 Million MTPA Integrated Steel Plant with 1.9 Million TPA with a Captive Power Plant of 68 MW in the 1st Phase.

Other terms and conditions, infrastructure facilities, incentives and concessions remain the same as in the G.O. read at (1) above.

By Order and in the name of the Governor of Karnataka

(**Aparna Pavate)**

P.R. 1529

Desk Officer (Technical Cell)

Commerce & Industries Department

COMMERCE & INDUSTRIES SECRETARIAT

Sub :- Approval to the Project Proposal of M/s. Zuari Industries Ltd., to establish a "I Million MTPA DAP Plant – NP / NPK Fertilizers" at Mudgeri, Karwar Taluk, Uttara Kannada District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. Zuari Industries Ltd., proposes to establish a " I Million MTPA DAP Plant – NP / NPK Fertilizers" at Mudgeri, Karwar Taluk, Uttara Kannada District, with an investment of Rs. 650 crores, generating employment to about 1000 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 240 SPI 2010, Bangalore, dated : 02-06-2010

Government is pleased to accord in principle approval to the Project Proposal of M/s. Zuari Industries Ltd., to establish a "I Million MTPA DAP Plant – NP / NPK Fertilizers" at Mudgeri, Karwar Taluk, Uttara Kannada District, with an investment of Rs. 650 crores, generating employment to about 1000 persons and extend the following infrastructure facilities, incentives and concessions.

Infrastructure Facilities :

1. **Land :** 209 acres – KIADB to acquire and allot as SUC in Mudgeri, Karwar Taluk, Uttara Kannada District.
2. **Water :** 15000 KLD from River Kali / Check Dam, subject to approval of the Water Resources Department.
3. Power : 2000 KVA from HESCOM.
4. **Incentives and Concessions :** As per applicable Industrial Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**

a) The project proponents shall provide employment to at least one member of the family of each land looser as the land is being acquired through KIADB.
b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

Aparna Pavate
Desk Officer (Technical Cell)
Commerce & Industries Department

P.R. 1530

COMMERCE AND INDUSTRIES SECRETARIAT

Sub :- Approval to the Project Proposal of M/s. P.M. Infrastructure Pvt. Ltd. To establish “Integrated Logistics & Warehouse Park, Industrial Infrastructure” at Chikkalur Village, Kasaba Hobli, Hoskote Taluk, Bangalore Rural District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. P.M. Infrastructure Pvt. Ltd. proposes to establish “Integrated Logistics & Warehouse Park, Industrial Infrastructure” at Sy.No. 125, Chikkalur Village, Kasaba Hobli, Hoskote Taluk, Bangalore Rural District with an investment of Rs. 215.83 crores, generating employment to about 4000 persons.

In the 22nd State High Level Clearance Committee (SHLCC) meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 213 SPI 2010, Bangalore, dated : 02-06-2010

Government is pleased to accord in principle approval to the project proposal of M/s. P.M. Infrastructure Pvt. Ltd. to establish “Integrated Logistics & Warehouse Park, Industrial Infrastructure” at Sy.No. 125, Chikkalur Village, Kasaba Hobli, Hoskote Taluk, Bangalore Rural District, with an investment of Rs. 215.83 crores, generating employment to about 4000 persons and extend the following infrastructure facilities, incentives and concessions.

Infrastructure Facilities :

1. **Land :** 163 acres – KIADB to acquire and allot as SUC in Sy. No. 125, Chikkalur Village, Kasaba Hobli, Hoskote Taluk, Bangalore Rural District.
2. **Water :** 0.04 MLD to be supplied by KIADB / own source.
3. **Power :** 4,000 KVA to be serviced by BESCOM.
4. **Incentives and Concessions :** As per applicable Industrial Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of

Human Resources Development plan shall be sent to the Commissioner for I.D. & Director of Industries and Commerce for monitoring.

4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka
Aparna Pavate
Desk Officer (Technical Cell)
Commerce & Industries Department

P.R. 1531

COMMERCE AND INDUSTRIES SECRETARIAT

Sub :- Approval to the Project Proposal of M/s. Saheli Exports Pvt Ltd., to establish a "70 MW Gased Based Power Plant", at Dhummonsur Village, Humanabad Taluk, Bidar District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. Saheli Exports Pvt Ltd., proposes to establish a "70 MW Gased Based Power Plant", at Dhummonsur Village, Humanabad Taluk, Bidar District, with an investment of Rs. 350 crores generating employment to about 58 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 205 SPI 2010, Bangalore, dated : 02-06-2010

Government is pleased to accord in principle approval to the project proposal of M/s. M/s. Saheli Exports Pvt Ltd., to establish a "70 MW Gased Based Power Plant", at Dhummonsur Village, Humanabad Taluk, Bidar District, with an investment of Rs. 350 crores generating employment to about 58 persons and extend the following infrastructure facilities, incentives and concessions.

Infrastructure Facilities :

1. **Land :** 40 acres – at Sy. No. 49, Dhummonsur Village, Humanabad Taluk, Bidar District U/s. 109 of KLR Act and conversion of the same to industrial use.
2. **Water :**14 KLD to be met out of own borewells.
3. **Power :** 70 MW to be serviced by GESCOM.
4. **Incentives and Concessions :** As per applicable Energy Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka
Aparna Pavate
Desk Officer (Technical Cell)
Commerce & Industries Department

P.R. 1532

COMMERCE AND INDUSTRIES SECRETARIAT

Sub :- Approval to the Project Proposal of M/s. Nestle India Ltd., to establish a unit for “Instant noodles and mixed condiments & seasonings” at Nanjangud Industrial Area, Mysore.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. Nestle India Ltd., proposes to establish a unit for “Instant noodles and mixed condiments & seasonings” at Nanjangud Industrial Area, Mysore, with an investment of Rs.349.23 crores, generating employment to about 630 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 206 SPI 2010, Bangalore, dated : 02-06-2010

Government is pleased to accord in principle approval to the project proposal of M/s. Nestle India Ltd., to establish a unit for “Instant noodles and mixed condiments & seasonings” at Nanjangud Industrial Area, Mysore, with an investment of Rs. 349.23 crores, generating employment to about 630 persons and extend the following infrastructure facilities, incentives and concessions.

Infrastructure Facilities :

1. **Land :** Within the existing factory premises in 82 acres of land at Nanjangud Industrial Area, Mysore.
2. **Water :** 25 KLD of water from KIADB and 500 KLD from Kabini river, subject to approval of the Water Resources Department.
3. **Power :** 6620 KVA to be serviced by CESC.
4. **Incentives and Concessions :** As per applicable Industrial Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a. The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   b. The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka
Aparna Pavate
Desk Officer (Technical Cell)
Commerce & Industries Department

P.R. 1533

COMMERCE AND INDUSTRIES SECRETARIAT

Sub :- Approval to the Project Proposal of M/s. Godrej Properties Ltd. to establish a “Health Tourism Project” at Eerannahalli (Kudawatti) Village, Nandi Hills, Chikkaballapura Road, Chikkaballapura District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. Godrej Properties Ltd. proposes to establish a “Health Tourism Project” at Eerannahalli (Kudawatti) Village, Nandi Hills, Chikkaballapura Road, Chikkaballapura District with an investment of Rs. 329.97 crores, generating employment to about 500 persons.

In the 22nd State High Level Clearance Committee (SHLCC) meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 207 SPI 2010, Bangalore, dated : 02-06-2010

Government is pleased to accord in principle approval to the Project Proposal of M/s. Godrej Properties Ltd. to establish a "Health Tourism Project" at Eerannahalli (Kudawatti) Village, Nandi Hills, Chikkaballapura Road, Chikkaballapura District with an investment of Rs. 329.97 crores, generating employment to about 500 persons and extend the following infrastructure facilities, incentives and concessions.

Infrastructure Facilities :

1. **Land :** 45 acres – Own land at Sy. Nos. 89, 178, 179, 181/1, 181/2, 191/3, 192/2, 195/5, 200 & 258, Eerannahalli (Kudawatti) Village, Nandi Hills, Chikkaballapura Road, Chikkaballapura District, subject to condition that the promoters to obtain conversion of land from Deputy Commissioner, Chikkaballapur and necessary approvals from local planning authority/Department of Town Planning.
2. **Water :** 700 KLD (100 KLD from local authorities, 400 KLD from own borewells and 200 KLD from water recycling).
3. **Power :** 10,000 KVA to be serviced by BESCOM.
4. **Incentives and Concessions :** As per applicable under Tourism Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   (a) The project proponents shall provide employment to at least one member of the family of each land looser as the land is being acquired through VADA.
   (b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   (c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of theGovernor of Karnataka

Aparna Pavate

Desk Officer (Technical Cell)

Commerce & Industries Department

P.R. 1534

ಸಹಕಾರ ಸಚಿವಾಲಯ

ವಿಷಯ : ಶ್ರೀ ಜಿ.ಎಂ. ಅಮರನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಉಪ ವಿಭಾಗ, ಹಾವೇರಿ ಇವರ ಅಮಾನತ್ತನ್ನು ತೆರವುಗೊಳಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ : ಕೃಮಾಇ/121/ಸಿಬ್ಬಂದಿ-1(ಬಿ)/2010, ದಿನಾಂಕ 24-04-2010.
ಶ್ರೀ ಜಿ.ಎಂ. ಅಮರನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಅಮಾನತ್ತಿನಲ್ಲಿರುವ) ರವರ ಮನವಿ ದಿನಾಂಕ 3-05-2010.

ಪ್ರಸ್ತಾವನೆ :

ಕಾರ್ಮಿಕ ಸಚಿವಾಲಯ

ವಿಷಯ : ಗಡಿಭಾಗ ಮತ್ತು ಹೊರರಾಜ್ಯಗಳಲ್ಲಿ ನೆಲೆಸಿರುವ ಕನ್ನಡಿಗರಿಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವ ಅವಕಾಶ ಕಲ್ಪಿಸುವ ಬಗ್ಗೆ ಆದೇಶ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 123 ಇಟಿಎಕ್ಸ್ 1984, ದಿನಾಂಕ 21–01–1986 .

2) ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 86 ಇಟಿಎಕ್ಸ್ 1986, ದಿನಾಂಕ 24–04–1986

3) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂಖ್ಯೆ : ಉತನಿ/ಉದ್ಯೋಗ/ಉನೀಕಾ–05/ವಿವ–29/2009–10, ದಿನಾಂಕ 04–03–2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಹಾರಾಷ್ಟ್ರ ರಾಜ್ಯದ ಘಾದಿಂಗ್‌ಲಾಜ್, ಜತ್, ಅಕ್ಕಲ ಕೋಟೆ, ದಕ್ಷಿಣ ಸೊಲ್ಲಾಪುರದ ತಾಲ್ಲೂಕುಗಳು ಹಾಗೂ ಕೇರಳ ರಾಜ್ಯದ ಕಾಸರಗೋಡು ತಾಲ್ಲೂಕಿನಲ್ಲಿ ವಾಸವಾಗಿರುವ ಕನ್ನಡಿಗರ ಪೈಕಿ ಯಾರು ಪ್ರಾಥಮಿಕ ಶಾಲೆಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೋ ಅಂತಹವರಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಉದ್ದೇಶಕ್ಕೆ ಕರ್ನಾಟಕ ರಾಜ್ಯದಲ್ಲಿ 15 ವರ್ಷಗಳು ವಾಸವಾಗಿರಬೇಕೆಂಬ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕದ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳ ಗಡಿ ಪ್ರದೇಶದ ತಾಲ್ಲೂಕುಗಳಲ್ಲಿರುವ ಕನ್ನಡಿಗರು ಪ್ರೈಮರಿ ಶಾಲೆಯ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಾಗಿದ್ದರೆ ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆಂಬ ನಿಯಮವನ್ನು ಸಡಿಲಗೊಳಿಸಿದ್ದು, ಇಂತಹ ಕನ್ನಡಿಗರು ತಮ್ಮ ವಾಸಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೋಂದಾಯಿಸಬಹುದೆಂದು ಸೂಚಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 18–01–2010 ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಅಭ್ಯರ್ಥಿಗಳು ದೇಶದ ಯಾವುದೇ ರಾಜ್ಯದಲ್ಲಾಗಲೀ ಪ್ರೈಮರಿ ಶಾಲೆಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರೆ (ಓದಿದವರಾಗಿದ್ದರೆ) ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆಂಬ ನಿಯಮವನ್ನು ಸಡಿಲಗೊಳಿಸಿ ಅಂತಹ ಕನ್ನಡಿಗರು ತಮ್ಮ ವಾಸ ಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೋಂದಾಯಿಸಲು ಅವಕಾಶ ಕಲ್ಪಿಸಲು ಪರಿಷ್ಕೃತ ಅದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 58 ಇಟಿಎ 2009, ಬೆಂಗಳೂರು, ದಿನಾಂಕ: 7ನೇ ಏಪ್ರಿಲ್, 2010

ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲೂಎಲ್ 86 ಇಟಿಎಕ್ಸ್ 1986 ದಿನಾಂಕ 24–04–1986ನ್ನು ಭಾಗಶಃ ಮಾರ್ಪಡಿಸಿ, ದೇಶದ ಯಾವುದೇ ಭಾಗದಲ್ಲಾಗಲಿ, ಪ್ರೈಮರಿ ಶಾಲೆಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ (ಪ್ರೌಢಶಾಲೆ) ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರೆ, ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆನ್ನುವ ನಿಯಮವನ್ನು ಸಡಿಲಗೊಳಿಸಿ ಅಂತಹ ಕನ್ನಡಿಗರು ತಮ್ಮ ವಾಸಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸುವ ಅವಕಾಶ ಕಲ್ಪಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎ. ಎಸ್. ವಿಶ್ವೇಶ್ವರಯ್ಯ)

ಪೀಠಾಧಿಕಾರಿ

ಪಿ.ಆರ್. 1567 ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಕಡಮನಹಳ್ಳಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ : 1) ದಿನಾಂಕ 20–03–10ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ–3/2009–10/1884.

2) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 09–04–10ರ ಪತ್ರ ಸಂಖ್ಯೆ : ಮುಸದ/ಆಪ್ತ ಶಾಖೆ/ಟೆಂಡರ್/08–09, 455.

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಕಡಮನಹಳ್ಳಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ 15.00 ಲಕ್ಷ ರೂ.ಗಳ ಅಂದಾಜಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ

ರವರು ಆಡಳಿತಾತ್ಮಕ ಅನುಮೋದನೆ ಹಾಗೂ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1.	ಪ್ರಜಾವಾಣಿ ದಿನಪತ್ರಿಕೆ	ದಿ. 05-02-2010
2.	ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆ	ದಿ. 06-02-1010

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ನಿಗದಿತ ದಿನಾಂಕದಂದು ಇ-ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಇವರ ಟೆಂಡರ್‌ನ್ನು ದಿನಾಂಕ 15-02-10ರಂದು ತೆರೆಯಲಾಗಿದೆ. ವಿವರ ಕೆಳಕಂಡಂತಿದೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 14,01,961/-

ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1.	ವಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರು	ರೂ. 14,86,274	6.01 ಹೆಚ್ಚು

ಮೇಲ್ಕಂಡಂತೆ ಶ್ರೀ ವಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.01ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 05-04-10ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 14,01,961-00ಗಳ ಮೇಲೆ ಶೇಕಡ 6.01ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 14,86,274-00 ಗಳಿಗೆ ಕಾಮಗಾರಿಯನ್ನು ಶ್ರೀ ವಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟಂಡರ್ ಪರಿಶೀಲನಾ ಸಮಿತಿಯು ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 17 ಅಪಿಬಂ 2010, ಬೆಂಗಳೂರು, ದಿನಾಂಕ: 16ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಕಡಮನಹಳ್ಳಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರ್‌ಗೆ ಇಡಲಾದ ಮೊತ್ತ ರೂ. 14,01,961-00ಗಳ ಮೇಲೆ ಶೇಕಡ 6.01ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 14,86,274-00 ಗಳಿಗೆ (ಹದಿನಾಲ್ಕು ಲಕ್ಷದ ಎಂಭತ್ತಾರು ಸಾವಿರದ ಇನ್ನೂರ ಎಪ್ಪತ್ನಾಲ್ಕು ರೂ.ಗಳು ಮಾತ್ರ) ಶ್ರೀ ವಿ. ರಾಮಸ್ವಾಮಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು

2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು

3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಸಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1568 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಆರ್ಥಿಕ ಸಚಿವಾಲಯ

ವಿಷಯ : ಯಾದಗಿರಿ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಜಿಲ್ಲಾ ಕಛೇರಿ ಸ್ಥಾಪಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಅಧಿಸೂಚನೆ ಸಂಖ್ಯೆ : ಕಂಇ 59 ಭೂದಾಪು 2008, ದಿನಾಂಕ 26–12–2009 .

2) ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರ ಪತ್ರ ಸಂಖ್ಯೆ : ವಿವಿ/ಸಿಶಾ/ಯಾದಗಿರಿ ಜಿಲ್ಲೆ/2055/2009–10, ದಿನಾಂಕ 31–01–2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಯಾದಗಿರಿ ಪಟ್ಟಣವನ್ನು ಕೇಂದ್ರಸ್ಥಾನವನ್ನಾಗಿರಿಸಿ ದಿನಾಂಕ 30–12–2009 ರಿಂದ ಜಾರಿಗೆ ಬರುವಂತೆ ಹೊಸದಾಗಿ ಯಾದಗಿರಿ ಜಿಲ್ಲೆಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮೇಲಿನ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಹೊಸದಾಗಿ ರಚನೆಯಾದ ಯಾದಗಿರಿ ಜಿಲ್ಲೆಯಲ್ಲಿ ಕೆಳಕಂಡ ಸಿಬ್ಬಂದಿ ವರ್ಗದವರೊಂದಿಗೆ ಜಿಲ್ಲಾ ವಿಮಾ ಕಛೇರಿಯನ್ನು ಪ್ರಾರಂಭಿಸಲು ಅದೇಶ ಹೊರಡಿಸುವಂತೆ ಕೋರಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕ್ರ. ಸಂ.	ಹುದ್ದೆಗಳು	ವೇತನ ಶ್ರೇಣಿ	ಹೊಸ ಜಿಲ್ಲಾ ವಿಮಾ ಕಛೇರಿಗೆ ಮಂಜೂರಾಗಬೇಕಾದ ಸಿಬ್ಬಂದಿ ಬಲ	ಗುಲ್ಬರ್ಗಾ ಜಿಲ್ಲಾ ವಿಮಾ ಕಛೇರಿಯಿಂದ ಮರು ವಿನ್ಯಾಸಗೊಳಿಸುವ ಸಿಬ್ಬಂದಿ	ಹೊಸದಾಗಿ ಸೃಜಿಸಬೇಕಾದ ಹುದ್ದೆಗಳು
1.	ಜಿಲ್ಲಾ ವಿಮಾಧಿಕಾರಿ	11400–21600	1	–	1
2.	ಅಧೀಕ್ಷಕರು	10000–18150	1	–	1
3.	ಪ್ರಥಮ ದರ್ಜೆ ಸಹಾಯಕರು	7275–13350	2	2	–
4.	ದ್ವಿತೀಯ ದರ್ಜೆ ಸಹಾಯಕರು	5800–10500	2	2	–
5.	ಬೆರಳಚ್ಚುಗಾರರು	5800–10500	1	–	1
6.	'ಡಿ' ದರ್ಜೆ ನೌಕರರು	4800–7275	1	–	1
	ಒಟ್ಟು		**8**	**4**	**4**

ಮೇಲ್ಕಂಡ ವಿವರಗಳಂತೆ ನೂತನ ಯಾದಗಿರಿ ಜಿಲ್ಲಾ ವಿಮಾ ಕಛೇರಿಗೆ ಒಟ್ಟು 8 ಹುದ್ದೆಗಳ ಅವಶ್ಯಕತೆ ಇದ್ದು ಅದರಲ್ಲಿ ಗುಲ್ಬರ್ಗಾ ಜಿಲ್ಲೆಯಿಂದ 4 ಹುದ್ದೆಗಳನ್ನು ಮರು ವಿನ್ಯಾಸಗೊಳಿಸುವಂತೆ (Redeployment) ಹಾಗೂ 4 ಹುದ್ದೆಗಳನ್ನು ಹೊಸದಾಗಿ ಸೃಜಿಸುವಂತೆ ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರು ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 72 ಕವಿಇ 2010, ಬೆಂಗಳೂರು, ದಿನಾಂಕ: 09ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಹೊಸದಾಗಿ ರಚಿಸಿರುವ ಯಾದಗಿರಿ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಜಿಲ್ಲಾ ಕಛೇರಿಯನ್ನು ಕೆಳಕಂಡ ಹುದ್ದೆಗಳೊಂದಿಗೆ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಹುದ್ದೆಗಳು	ವೇತನ ಶ್ರೇಣಿ	ಅಧಿಕಾರಿ ಮತ್ತು ನೌಕರರ ಸಂಖ್ಯೆ	ಗುಲ್ಬರ್ಗಾ ಜಿಲ್ಲೆಯಿಂದ ಮರುವಿನ್ಯಾಸಗೊಳಿಸ ಲಾದ ಹುದ್ದೆಗಳು	ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಹೊಸದಾಗಿ ಸೃಜಿಸಲಾದ ಹುದ್ದೆಗಳು
1.	ಜಿಲ್ಲಾ ವಿಮಾಧಿಕಾರಿ	11400–21600	1	–	1
2.	ಅಧೀಕ್ಷಕರು	10000–18150	1	–	1
3.	ಪ್ರಥಮ ದರ್ಜೆ ಸಹಾಯಕರು	7275–13350	2	2	–
4.	ದ್ವಿತೀಯ ದರ್ಜೆ ಸಹಾಯಕರು	5800–10500	2	2	–
5.	ಬೆರಳಚ್ಚುಗಾರರು	5800–10500	1	–	1
6.	'ಡಿ' ದರ್ಜೆ ನೌಕರರು	4800–7275	1	–	1
		ಒಟ್ಟು	**8**	**4**	**4**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎನ್. ಶ್ರೀನಿವಾಸಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಪಿ.ಆರ್. 1569

ಆರ್ಥಿಕ ಸಚಿವಾಲಯ

ವಿಷಯ : ವೆಚ್ಚ ಸುಧಾರಣಾ ಆಯೋಗದ ಅವಧಿಯನ್ನು ವಿಸ್ತರಿಸುವ ಕುರಿತು

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಆಇ 76 ಸಮಯ 2009, ದಿನಾಂಕ 06–06–2009

2) ಅಧ್ಯಕ್ಷರು, ವೆಚ್ಚ ಸುಧಾರಣಾ ಆಯೋಗ ಇವರ ಪತ್ರ ಸಂಖ್ಯೆ : ಇಆರ್‌ಸಿ/ಬಿಎಲ್‌ಆರ್–ಆರ್‌ಇಪಿಟಿ/2/2009–10, ದಿನಾಂಕ 20–05–2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶ ದಿನಾಂಕ 06–06–2009ರಲ್ಲಿ ಅಧ್ಯಕ್ಷರು, ಸದಸ್ಯರು ಮತ್ತು ಒಬ್ಬರು ಕಾರ್ಯದರ್ಶಿಯನ್ನೊಳಗೊಂಡಂತೆ ವೆಚ್ಚ ಸುಧಾರಣಾ ಆಯೋಗವನ್ನು ಒಂದು ವರ್ಷದ ಅವಧಿಗೆ ರಚನೆ ಮಾಡಲಾಗಿತ್ತು, ಮೇಲೆ ಓದಲಾದ (2)ರ ಪತ್ರದಲ್ಲಿ ಅಧ್ಯಕ್ಷರು, ವೆಚ್ಚ ಸುಧಾರಣಾ ಆಯೋಗರವರು ಸದರಿ ಆಯೋಗದ ಒಂದು ವರ್ಷದ ಅವಧಿಯು ದಿನಾಂಕ 05–06–2010ಕ್ಕೆ ಮುಕ್ತಾಯಗೊಳ್ಳಲಿದ್ದು, ಆಯೋಗದ ಕಾರ್ಯಗಳು ಮುಗಿಯುವ ಹಂತದಲ್ಲಿರುವುದರಿಂದ ಅವುಗಳನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕಾಲಾವಕಾಶದ ಅವಶ್ಯಕತೆ ಇರುವುದರಿಂದ, ಆಯೋಗದ ಅವಧಿಯನ್ನು ದಿನಾಂಕ 31–03–2011ರ ವರೆಗೆ ವಿಸ್ತರಿಸಲು ಕೋರಿರುತ್ತಾರೆ.

ಅಧ್ಯಕ್ಷರು, ವೆಚ್ಚ ಸುಧಾರಣಾ ಆಯೋಗರವರ ಕೋರಿಕೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗಿದ್ದು, ಸದರಿ ಆಯೋಗದ ಅವಧಿಯನ್ನು ದಿನಾಂಕ 31–03–2010ರವರೆಗೆ ವಿಸ್ತರಿಸಲು ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಇ 54 ಸಮಯ 2010, ಬೆಂಗಳೂರು, ದಿನಾಂಕ: 05ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಆಇ 76 ಸಮಯ 2009, ದಿನಾಂಕ 06–06–2009ರಲ್ಲಿ ರಚಿತವಾಗಿರುವ ವೆಚ್ಚ ಸುಧಾರಣಾ ಆಯೋಗದ ಅವಧಿಯನ್ನು ದಿನಾಂಕ 31–03–2011ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ. ಉಳಿದಂತೆ ದಿನಾಂಕ 06–06–2010ರ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಕೆ. ಎಂ. ವೀರಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ವಾರ್ತೆ–2 & ಸಮನ್ವಯ)

ಪಿ.ಆರ್. 1570

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಎ. ಎಂ. ಫರೂಕ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಮೇಲ್ಮನವಿ ಪ್ರಾಧಿಕಾರ, ಇವರ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : 1) ಅಧಿಸೂಚನೆ ಸಂಖ್ಯೆ : ಅಪಜೀ 97 ಇಪಿಸಿ 2006, ದಿನಾಂಕ 30–4–2008

2) ಅಧಿಸೂಚನೆ ಸಂಖ್ಯೆ : ಅಪಜೀ 1 ಇಪಿಸಿ 2009, ದಿನಾಂಕ 9–3–2010

3) ಅ.ಸ. ಪತ್ರ ಸಂಖ್ಯೆ : ಕೆ.ಎಸ್. ಎಎ 10/2009–10, ದಿನಾಂಕ 24–3–2010

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಶ್ರೀ ಎ. ಎಂ. ಫರೂಕ್, ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಇವರನ್ನು ಕರ್ನಾಟಕ ರಾಜ್ಯ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಗೆ ನೇಮಕಾತಿ ಮಾಡಲಾಗಿದೆ. ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸಲಾಗಿದೆ. ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಅಧ್ಯಕ್ಷರ ವೇತನ ರೂ. 80,000ಕ್ಕೆ ತುಟ್ಟಿಭತ್ಯೆ ಹಾಗೂ ಮನೆ ಬಾಡಿಗೆ ಭತ್ಯೆಯನ್ನು ಸೇರಿಸಿ ಒಟ್ಟು ಮೊಬಲಗಿನಲ್ಲಿ ಈಗಾಗಲೇ ಪಡೆಯುತ್ತಿರುವ ನಿವೃತ್ತಿ ವೇತನವನ್ನು ಕಳೆಯಬೇಕೆಂದು ಹಾಗೂ ವೈದ್ಯಕೀಯ ಸೌಲಭ್ಯ ಮತ್ತು ನಗರ ಪರಿಹಾರ ಭತ್ಯೆಯ ಬಗ್ಗೆ ಸ್ಪಷ್ಟ ಆದೇಶ ನೀಡಬೇಕೆಂದು ಜಸ್ಟೀಸ್ ಎ. ಎಂ. ಫರೂಕ್ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು. ಅದರಂತೆ ಮೂಲವೇತನ ರೂ. 80,000ಕ್ಕೆ ಅನ್ವಯವಾಗುವ ತುಟ್ಟಿಭತ್ಯೆ ನೀಡಲು ಸಹಮತಿಸಿರುತ್ತದೆ.

ಆರ್ಥಿಕ ಇಲಾಖೆಯ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ (2)ರಲ್ಲಿ ಓದಲಾದ ಆದೇಶವನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದೆ. ಅದರಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 1 ಇಪಿಸಿ 2009, ಬೆಂಗಳೂರು, ದಿನಾಂಕ: 11ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎ. ಎಂ. ಫರೂಕ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಮೇಲ್ಮನವಿ ಪ್ರಾಧಿಕಾರ, ಇವರ ನೇಮಕಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಅಪಜೀ 1 ಇಪಿಸಿ 2009 ದಿನಾಂಕ 9–3–2010 ರಲ್ಲಿ ಹೊರಡಿಸಲಾಗಿದ್ದ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ. ಈ ಆದೇಶವನ್ನು ದಿನಾಂಕ 9–3–2010ರ ಸಮಸಂಖ್ಯೆಯ ಆದೇಶಕ್ಕೆ ಬದಲಾಗಿ ಹೊರಡಿಸಲಾಗಿದೆ ಮತ್ತು ದಿನಾಂಕ 30–4–2008 ರಿಂದ ಪೂರ್ವ ಅನ್ವಯವಾಗುವಂತೆ ಆದೇಶಿಸಿದೆ.

1) **ವೇತನ :** ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನವಾದ ರೂ. 80,000

2) **ಆತಿಥ್ಯ ವೆಚ್ಚ :** (Sumptuary allowance) : ದಿನಾಂಕ 01–09–2008 ರಿಂದ ಜಾರಿಗೆ ಬರುವಂತೆ ಮಾಸಿಕ ರೂ. 12,000/–

3) **ರಜೆ ಮತ್ತು ಪ್ರಯಾಣ ರಿಯಾಯಿತಿ ಸೌಲಭ್ಯ :** ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಲಭ್ಯವಾಗುವ ರೀತಿಯಲ್ಲಿ

4) **ತುಟ್ಟಿ ಭತ್ಯೆ/ಮನೆ ಬಾಡಿಗೆ ಭತ್ಯೆ :** ಮೂಲ ವೇತನ ರೂ. 80,000/–ಗಳಿಗೆ ಲಭ್ಯವಾಗುವಂತೆ ನೀಡಲಾಗಿದೆ.

5) **ವೈದ್ಯಕೀಯ ಸೌಲಭ್ಯ :** ರಾಜ್ಯ ಸರ್ಕಾರದ 'ಎ' ವರ್ಗದ ಅಧಿಕಾರಿಗಳಿಗೆ ಲಭ್ಯವಾಗುವ ವೈದ್ಯಕೀಯ ವೆಚ್ಚವನ್ನು ನಿಗದಿಪಡಿಸಲಾಗಿದೆ.

6) **ನಗರ ಭತ್ಯೆ :** ಆಯೋಗ/ಸಮಿತಿ ಪ್ರಾಧಿಕಾರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರಿಗೆ ನಗರ ಪರಿಹಾರ ಭತ್ಯೆ ನೀಡಲಾಗುವುದಿಲ್ಲ.

7) ಒಟ್ಟು ವೇತನದಲ್ಲಿ ಪಡೆಯುತ್ತಿರುವ ವಿಶ್ರಾಂತಿ ವೇತನವನ್ನು ಕಳೆದು ಲಭ್ಯವಾಗುವ ನಿವ್ವಳ ವೇತನವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 2175 ಸೇ. 3/09, ದಿನಾಂಕ 4–12–2009, ಆಇ 161 ವೆಚ್ಚ–5/10 ದಿನಾಂಕ 20–2–2010 ಹಾಗೂ ಆಇ 318 ಸೇ–3/10, ದಿನಾಂಕ 17–5–2010ರಲ್ಲಿ ನೀಡಿರುವ ಅಭಿಪ್ರಾಯಗಳೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಬಿ. ಮನೋಹರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. 1571

ENERGY SECRETARIAT

Sub :- Establishment of a 1320 MW Coal based Power Project in Gulbarga Taluk.

Read :- (1) G.O. No. EN 126 PPC 2008 dated 07-10-2008

***

Preamble:

1. Approval was accorded for the following vide G.O. read at (1) above to establish a 1320 MW Coal based Thermal Power Project in Farthabad Hobli of Gulbarga District under competitive bidding route :

a) The Deputy Commissioner, Gulbarga District to initiate and expedite the acquisition of land of about 1500 acres for a coal based thermal power project (2x660 MW) in Farthabad Hobli covering the villages of Ferozabad, Nadisinur and Kiranigi in Gulbarga Taluk.
b) Water Resource Department to increase allocation of water from the Krishna river from 1.56 TMC to 2.06 TMC.
c) Finance Department to allocate Rs. 15 Crores, out of Special Grants and to deposit the same with the Deputy Commissioner, Gulbarga District for land acquisition. Power Company of Karnataka Limited (PCKL) to collect this amount from the Successful bidder and reimburse the same to Government.
d) Power Company of Karnataka Limited (PCKL) to pursue with Government of India to provide coal linkage for this project and/or berthing facilities to move 4 Million Metric Ton of coal from Chennai.
e) Power Company of Karnataka Limited to request the Indian Railways to facilitate movement of coal provided through domestic linkage, or through Chennai Port to Gulbarga District.

2. The Government of Karnataka has already released Rs. 10 Crores which is deposited with Deputy Commissioner, Gulbarga for payment towards Land Acquisition.

3. This project is being developed by Power Company of Karnataka Limited (PCKL) through bid route under case-2 of Ministry of Power Guidelines, Govt. of India to be later awarded to the successful bidder under the Independent Power Producers' (IPPS) frame work.

4. PCKL has floated bids to indentify a potential bidder. Response has been excellent and 11 bidders have been qualified at the RFQ State. The RFP, PPA and other documents were sent to qualified bidders in the month of August 2008 and a Pre-bid meeting was held on 23-08-2008. Further, the RFP document is modified as per the suggestions of the Karnataka Electricity Regulatory Commission (KERC). The revised RFP documents were sent to all the 11 Qualified Bidders. Another Prebid meeting was held on 18-01-2010. During this meeting it was informed to all the bidders that the sourcing of fuel shall be the responsibility of the bidders. The bidders can source either imported coal or domestic coal. This clause has been incorporated in the revised document submitted to the

KERC for the approval. In the meanwhile, at the pre-bid meeting, the bidders have been told that they can also quote with imported coal as the fuel option.

5. In accordance with Govt. of India, MOP Guidelines under "Case-2" standard Bid Document, one of the pre-requisites is identification and Acquisition of land. Accordingly the Land Acquisition for 1516 Acres is in advanced stage. After protracted negotiation with the farmers, the Deputy Commissioner has suggested that an amount of Rs. 9.00 lakh per Acre is appropriate. In view of the fertile nature of the land and the fact that it is devoted to Tur Dal cultivation, this price is realistic, The approximate amount for acquisition of land will be about Rs. 150 Crores. To realize the projects, it is important to take the possession of the land and thereafter transfer it to the successful bidder after recouping the cost.

6. After detailed examination of the proposal, the following Orders are issued ;

Government Order No. EN 126 PPC 2008, Bangalore, dated : 16-06-2010

Under the circumstances explained in the Preamble, Government is pleased to accord approval for the following :

a) To release Rs. 126.44 Crore (Rs. One hundred twenty six crores and forty four lakhs only) as the balance cost of the land acquisition for acquiring 1516acres of land at Rs. 9.00 lakhs per Acre (Rs. Nine lakh only) as suggested by the Deputy Commissioner, Gulbarga District in Farthabad Hobli covering the villages of Ferozabad, Nadisinur and Kiranigi in Gulbarga Taluk to Power Company of Karnataka Limited (PCKL) under the Head of Account 4801-01-190-0-09-211 Investment in Power Utilities.

b) Power Company of Karnataka limited (PCKL) shall obtain the Counter Signature of the Additional Chief Secretary to Government, Energy Department of payee's receipt, draw the amount and transfer this amount to the account of the Deputy Commissioner, Gulbarga, to facilitate purchase of 1516 acres of land for 1320 MW Gulbarga coal based power project.

c) To authorize Power Company of Karnataka Limited as the Agency to collect this amount from the successful bidder and thereafter pay it back to the Government / Utilities as decided by the Government by 31-03-2011.

This Order is issued with the concurrence of Finance Department vide their Note No. FD 945 EXP-I/2010, dated 09-06-2010.

By Order and in the name of the Governor of Karnataka

(**S. J. Sampath Kumar)**

P.R. 1572

Under Secretary to Government

Energy Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದ ಕಂದಾಯ ಇಲಾಖೆಯ ಕಾನೂನು ಕೋಶದಲ್ಲಿ ಸೃಜಿಸಲಾಗಿರುವ ಕಾನೂನು ಅಧಿಕಾರಿಗಳ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 408 ಸಅಸೇ 2008, ದಿನಾಂಕ 06–09–2008
2) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 594 ಸಅಸೇ 2009, ದಿನಾಂಕ 03–09–2009
3) ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಕಂಇ 26 ಭೂಸಾವ್ಯಾ 2006, ದಿನಾಂಕ 04–05–2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಂದಾಯ ಇಲಾಖೆಯಲ್ಲಿ 3 ಕಾನೂನು ಅಧಿಕಾರಿಗಳ ಹುದ್ದೆಗಳನ್ನು ತಾತ್ಕಾಲಿಕವಾಗಿ ದಿನಾಂಕ 05–08–2008 ರಿಂದ ಜಾರಿಗೆ ಬರುವಂತೆ 1 ವರ್ಷದ ಅವಧಿಗೆ ಸೃಜಿಸಲಾಗಿದೆ. ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಸೃಜಿಸಲಾದ 3 ಕಾನೂನು ಅಧಿಕಾರಿಗಳ ಹುದ್ದೆಗಳಲ್ಲಿ 2 ಕಾನೂನು ಅಧಿಕಾರಿಗಳ ಹುದ್ದೆಗಳನ್ನು ದಿನಾಂಕ 05–08–2009 ರಿಂದ 31–03–2010 ರವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ. ಮೇಲೆ ಕ್ರಮಸಂಖ್ಯೆ (3) ರಲ್ಲಿ ಓದಲಾದ ಅನಧಿಕೃತ

ಟಿಪ್ಪಣಿಯಲ್ಲಿ ಕಂದಾಯ ಇಲಾಖೆಯಲ್ಲಿ ಕಾನೂನು ಕೋಶದಲ್ಲಿ ಹೆಚ್ಚುವರಿಯಾಗಿ ಸೃಜಿಸಲಾಗಿರುವ 2 ಕಾನೂನು ಅಧಿಕಾರಿ ಹುದ್ದೆಗಳನ್ನು ದಿನಾಂಕ 01-04-2010 ರಿಂದ 31-03-2011 ರವರೆಗೆ ಮುಂದುವರಿಸುವಂತೆ ಹಾಗೂ ಕಾನೂನು ಅಧಿಕಾರಿಗಳಿಗೆ ಮತ್ತು ಅವರ ಸಹಾಯಕ ಸಿಬ್ಬಂದಿಗಳಿಗೆ ಸಿಆಸು ಇಲಾಖೆಯಿಂದಲೇ ವೇತನ ಪಾವತಿಸುವಂತೆ ಕಂದಾಯ ಇಲಾಖೆಯು ಕೋರಿದೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 39 ಸಅಸೇ 2010, ಬೆಂಗಳೂರು, ದಿನಾಂಕ: 15ನೇ ಜೂನ್, 2010

ಕರ್ನಾಟಕ ಸರ್ಕಾರ ಸಚಿವಾಲಯದ ಕಂದಾಯ ಇಲಾಖೆಯ ಕಾನೂನು ಕೋಶದಲ್ಲಿ ದಿನಾಂಕ 31-03-2010ರವರೆಗೆ ಮುಂದುವರಿಸಲಾದ 2 ಕಾನೂನು ಅಧಿಕಾರಿಗಳ ಹುದ್ದೆಗಳನ್ನು ದಿನಾಂಕ 01-04-2010 ರಿಂದ ದಿನಾಂಕ 31-03-2011 ರವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆಯು ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಚ್. ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1573 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು ಅವರಿಗೆ ಇಲಾಖಾ ವಿಚಾರಣೆ ನಡೆಸಿದ ಸಂಬಂಧ ಗೌರವಧನ ಮತ್ತು ವಾಹನ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 208 ಸೇಇವಿ 2007, ದಿನಾಂಕ 02-01-2009
2) ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಅವರ ದಿನಾಂಕ 27-10-2009ರ ವಿಚಾರಣಾ ವರದಿ.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 2-1-2009ರ ಸರ್ಕಾರಿ ಆದೇಶದಲ್ಲಿ ಶ್ರೀ ಎಂ. ಎನ್. ಸೋಮಶೇಖರ್, ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಇವರು ಶ್ರೀ ಪ್ರಹ್ಲಾದ ಶ್ಯಾಮರಾವ್ ದೇಶ್‌ಪಾಂಡೆ, ನಿವೃತ್ತ ಶಿಕ್ಷಕರು ಪಾಣನೀಯ ಸಂಸ್ಕೃತ ಪಾಠಶಾಲೆ, ಬೆಳಗಾಂ ಇವರಿಗೆ ಪಿಂಚಣಿ ಮಂಜೂರು ಮಾಡುವ ಬಗ್ಗೆ ಅನಗತ್ಯ ವಿಳಂಬ ಮಾಡಿ ಈ ವಿಷಯವಾಗಿ ಕರ್ನಾಟಕ ಲೋಕಾಯುಕ್ತ ಬಯಸಿದ ಮಾಹಿತಿಯು ಕಡತದಲ್ಲಿ ಲಭ್ಯವಿದ್ದರೂ ಕ್ರೋಢೀಕರಿಸಿ ಮಾಹಿತಿ ಸಲ್ಲಿಸದೆ ಮತ್ತು ಈ ಕಡತವನ್ನು ಮೇಲಾಧಿಕಾರಿಗಳ ಗಮನಕ್ಕೆ ಸಲ್ಲಿಸದೆ ತಮ್ಮ ಹಂತದಲ್ಲಿಯೇ ನಿರ್ಣಯ ಕೈಗೊಂಡು ಅಂತಿಮವಾಗಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ಖುದ್ದಾಗಿ ಲೋಕಾಯುಕ್ತರ ಮುಂದೆ ಹಾಜರಾಗಲು ಕಾರಣರಾಗಿ ಕರ್ತವ್ಯ ಲೋಪವೆಸಗಿರುವ ಆರೋಪಕ್ಕಾಗಿ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಆದೇಶಿಸಿ ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ 27-10-2009ರ ವಿಚಾರಣಾ ವರದಿ ಹಾಗೂ ಮುಂಗಡ ರಶೀತಿಗಳನ್ನು ಸಲ್ಲಿಸಿದ್ದಾರೆ. ಅವರಿಗೆ ಸಂಭಾವನೆ ಹಾಗೂ ಸಾರಿಗೆ ಭತ್ಯೆಗಳನ್ನು ಮಂಜೂರು ಮಾಡುವ ಸಲುವಾಗಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 208 ಸೇಇವಿ 2007, ಬೆಂಗಳೂರು, ದಿನಾಂಕ: 8ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರಿಗೆ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 208 ಸೇಇವಿ 2007, ದಿನಾಂಕ 2-1-2009ರಲ್ಲಿ ನಿಗಧಿಪಡಿಸುವಂತೆ ರೂ. 8,000ಗಳ ಗೌರವಧನ ಹಾಗೂ ರೂ. 1,500ಗಳ ವಾಹನ ಭತ್ಯೆಯನ್ನು ಪಾವತಿ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು 2009-10ರ ಆಯವ್ಯಯ ಲೆಕ್ಕಶೀರ್ಷಿಕೆ-2052-ಸಚಿವಾಲಯ-ಸಾಮಾನ್ಯ ಸೇವೆಗಳು-090-ಸಚಿವಾಲಯ-01-ಕರ್ನಾಟಕ ಸರ್ಕಾರ ಸಚಿವಾಲಯ-051-ಸಾಮಾನ್ಯ ವೆಚ್ಚಗಳು ಇದರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಚ್. ಆರ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1574 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಇಂಧನ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಇಎನ್ 306 ಎನ್‌ಸಿಇ 2007, ಬೆಂಗಳೂರು ದಿನಾಂಕ: 25–05–2010

ಸರ್ಕಾರಿ ಆದೇಶ ಸಂಖ್ಯೆ: ಇಎನ್ 306 ಎನ್‌ಸಿಇ 2007 ದಿನಾಂಕ 15.12.2009ರ ಆದೇಶ ಭಾಗದ ಮೊದಲನೆ ಕಂಡಿಕೆ ನಂತರ ಈ ಕೆಳಗಿನ ಕೋಷ್ಟಕವನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು :–

Sl. No.	Stream	Latitude	Longitude
1	Kotekoppa	14°14’14’’	74°47’13’’
2	Nagahalli	14°14’44’’	74°46’07’’
3	Mavinagundi	14°13’56’’	74°48’22’’

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 1398

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕದರನಹಳ್ಳಿ ಗ್ರಾಮದ ಸ.ನಂ. 41ರಲ್ಲಿ 14.25 ಎಕರೆ ಜಮೀನನ್ನು ಶ್ರೀ ಸಿದ್ದಗಂಗಾ ಮಠದ ಪ್ರಸಾದ ನಿಲಯದ ದಾಸೋಹಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಶ್ರೀ ಸಿದ್ದಲಿಂಗ ಸ್ವಾಮಿಗಳು, ಕಿರಿಯ ಶ್ರೀಗಳು, ಶ್ರೀ ಸಿದ್ದಗಂಗಾ ಮಠ, ತುಮಕೂರು ಇವರ ಪತ್ರ ದಿ: 19.04.2007 ಮತ್ತು 14.06.2008.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (ಎನ್) ಸಿಆರ್ 3/09–10, ದಿ: 28.05.2009.

ಪ್ರಸ್ತಾವನೆ :

ಶ್ರೀ ಸಿದ್ದಲಿಂಗ ಸ್ವಾಮಿಗಳು, ಕಿರಿಯ ಶ್ರೀಗಳು, ಶ್ರೀ ಸಿದ್ದಗಂಗಾ ಮಠ, ತುಮಕೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಪತ್ರಗಳಲ್ಲಿ ಶ್ರೀ ಸಿದ್ಧಗಂಗಾ ಮಠದ ಪ್ರಸಾದ ನಿಲಯದ ದಾಸೋಹಕ್ಕಾಗಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕದರನಹಳ್ಳಿ ಗ್ರಾಮದ ಸ.ನಂ. 41 ಮತ್ತು 42 ರಲ್ಲಿ 46 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ದಿ: 28.05.2009 ರ ಪತ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕದರನಹಳ್ಳಿ ಗ್ರಾಮದ ಸ.ನಂ. 42 ರಲ್ಲಿ 30.10 ಎಕರೆ ಗೋಮಾಳ ಜಮೀನಿದ್ದು, ಈ ಪೈಕಿ 8.10 ಎಕರೆ ಜಮೀನು ದರಖಾಸ್ತು ಮೂಲಕ ವಿಲೇಯಾಗಿದ್ದು, ಉಳಿದ 22 ಎಕರೆ ಜಮೀನನ್ನು ಬಿ.ಎಂ.ಟಿಸಿ.ಗೆ ಮಂಜೂರು ಮಾಡಿರುವುದರಿಂದ ಈ ಸರ್ವೆ ನಂಬರಿನಲ್ಲಿ ಜಮೀನು ಖಾಲಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಕದರನಹಳ್ಳಿ ಗ್ರಾಮದ ಸ.ನಂ 41ರಲ್ಲಿ ಒಟ್ಟು 16.05 ಎಕರೆ ಗೋಮಾಳ ಜಮೀನಿದ್ದು, ಈ ಪೈಕಿ 1.20 ಎಕರೆ ಜಮೀನು ಸಾರ್ವಜನಿಕ ರಸ್ತೆಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಉಳಿದ 14.25 ಎಕರೆ ಜಮೀನು ಖಾಲಿ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 16 ಕಿ.ಮೀ. ಅಂತರದಲ್ಲಿದ್ದು, ಹಸಿರು ವಲಯದಲ್ಲಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(5)ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಹಾಗೂ ವ್ಯಾಪ್ತಿಯಿಂದ 25 ಕಿ.ಮೀ. ಅಂತರದಲ್ಲಿನ ಗ್ರಾಮಗಳ ಗೋಮಾಳ ಜಮೀನನ್ನು ಸರ್ಕಾರದ ಆದೇಶಕ್ಕೊಳಪಟ್ಟು ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 923 ಎಲ್‌ಜಿಬಿ 2007, ಬೆಂಗಳೂರು ದಿನಾಂಕ: 27-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ನಿಯಮ 21ನ್ನು ಸಡಿಲಿಸಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಕದರನಹಳ್ಳಿ ಗ್ರಾಮದ ಸ.ನಂ. 41ರಲ್ಲಿನ 14.25 ಎಕರೆ ಜಮೀನನ್ನು ಶ್ರೀ ಸಿದ್ದಗಂಗಾ ಮಠ, ತುಮಕೂರು ಇವರಿಗೆ ಪ್ರಸಾದ ನಿಲಯದ ದಾಸೋಹಕ್ಕಾಗಿ ಮಾರ್ಗಸೂಚಿ ಬೆಲೆಯ ಶೇಕಡ 10ರಷ್ಟು ದರ ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1399

ಇ. ಈಶ್ವರ ನಾಯಕ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂ.ಮಂ).

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕು, ಶಿರಸಿಯಲ್ಲಿರುವ ರೇಷ್ಮೆ ಇಲಾಖೆಯ ಜಮೀನನ್ನು ತೋಟಗಾರಿಕೆ ಕಾಲೇಜು ಸ್ಥಾಪಿಸುವುದಕ್ಕಾಗಿ ತೋಟಗಾರಿಕೆ ಇಲಾಖೆಗೆ ನೀಡುವ ಬಗ್ಗೆ

ಓದಲಾಗಿದೆ : ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ತೋಇ 203 ತೋಇವಿ 2010, ದಿನಾಂಕ: 11-5-2010.

ಪ್ರಸ್ತಾವನೆ :

2010-11ನೇ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿರವರು ಶಿರಸಿಯಲ್ಲಿ ಹೊಸದಾಗಿ ತೋಟಗಾರಿಕೆ ಕಾಲೇಜನ್ನು ಸ್ಥಾಪನೆ ಮಾಡುವ ಬಗ್ಗೆ ಘೋಷಣೆ ಆಗಿದ್ದು, ಪ್ರಸ್ತುತ ವರ್ಷದಲ್ಲಿಯೇ ಈ ತೋಟಗಾರಿಕೆ ಕಾಲೇಜನ್ನು ಪ್ರಾರಂಭ ಮಾಡಬೇಕಾಗಿರುವುದರಿಂದ ಈ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಕಟ್ಟಡ ಹಾಗೂ ಮೂಲ ಸೌಕರ್ಯದ ವ್ಯವಸ್ಥೆ ಅಗತ್ಯವಾಗಿದ್ದು, ತೋಟಗಾರಿಕೆ ವಿಶ್ವವಿದ್ಯಾಲಯ ತನ್ನದೇ ಆದ ಕಟ್ಟಡ ಹೊಂದಲು ಸ್ವಲ್ಪ ಕಾಲಾವಕಾಶದ ಅಗತ್ಯವಾಗಿರುತ್ತದೆಯಾದ್ದರಿಂದ ರೇಷ್ಮೆ ಇಲಾಖೆಗೆ ಸೇರಿದ ಈ ಕೆಳಗಿನ ಕಟ್ಟಡಗಳನ್ನು ತಾತ್ಕಾಲಿಕವಾಗಿ 2 ವರ್ಷಗಳ ಅವಧಿಗೆ ತೋಟಗಾರಿಕಾ ವಿಶ್ವವಿದ್ಯಾಲಯ ಬಾಗಲಕೋಟೆಗೆ ನೀಡುವಂತೆ ಹಾಗೂ 20 ಎಕರೆ ಜಮೀನನ್ನು ತೋಟಗಾರಿಕೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪ್ರಾಯೋಗಿಕ ತೋಟಗಾರಿಕೆ ನಿರ್ಮಿಸುವ ಸಲುವಾಗಿ ನೀಡುವಂತೆ ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಇವರು ಮೇಲೆ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯನ್ನು ಕೋರಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಶಿರಸಿ ನಗರದಲ್ಲಿ 2010-11 ನೇ ಸಾಲಿನ ತೋಟಗಾರಿಕಾ ಕಾಲೇಜನ್ನು ಪ್ರಾರಂಭಿಸಬೇಕಾಗಿರುವ ಹಿನ್ನಲೆಯಲ್ಲಿ ಈ ನೂತನ ಕಾಲೇಜನ್ನು ಪ್ರಾರಂಭಿಸುವುದಕ್ಕಾಗಿ ಶಿರಸಿಯಲ್ಲಿರುವ ರೇಷ್ಮೆ ಇಲಾಖೆಗೆ ಸೇರಿದ ಕಟ್ಟಡಗಳನ್ನು ತಾತ್ಕಾಲಿಕವಾಗಿ 2 ವರ್ಷದ ಅವಧಿಗೆ ತೋಟಗಾರಿಕೆ ಇಲಾಖೆ ನೀಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 14 ರೇಯೋವಿ 2010, ಬೆಂಗಳೂರು, ದಿನಾಂಕ 29-05-2010

ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕಿನ ಶಿರಸಿ ನಗರದಲ್ಲಿರುವ ರೇಷ್ಮೆ ಇಲಾಖೆಯ ಈ ಕೆಳಗಿನ ಕಟ್ಟಡಗಳನ್ನು ಹಾಗೂ 20 ಎಕರೆ ಜಮೀನನ್ನು 2 ವರ್ಷಗಳ ಅವಧಿಗೆ ಮಾತ್ರ ತೋಟಗಾರಿಕೆ ಕಾಲೇಜು ಪ್ರಾರಂಭಿಸುವುದಕ್ಕಾಗಿ ತಾತ್ಕಾಲಿಕವಾಗಿ ತೋಟಗಾರಿಕೆ ಇಲಾಖೆಗೆ ನೀಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಕಟ್ಟಡದ ಹೆಸರು	ಕ್ಷೇತ್ರ ಚ.ಮೀ.	ಕಟ್ಟಡ ಮಾದರಿ
1.	ಮಾದರಿ ರೇಷ್ಮೆ ನೇಯ್ಗೆ ಮನೆ (2 ಕೊಠಡಿಗಳು)	109.35	ಆರ್.ಸಿ.ಸಿ.
2.	ರೇಷ್ಮೆಗೂಡು ಮಾರುಕಟ್ಟೆ (3 ಕೊಠಡಿಗಳು)	202.65	ಸಿಮೆಂಟ್ ಚಾವಣೆ ಹೊಂದಿದ್ದು
3.	ರೇಷ್ಮೆ ರೀಲಿಂಗ್ ಸೆಂಟರ್ (ಪ್ರಸ್ತುತ ಡಿಡಿಪಿಐ ರವರ ಅಧೀನದಲ್ಲಿರುವ)	228.15	ಸಿಮೆಂಟ್ ಚಾವಣೆ ಹೊಂದಿದ್ದು

4.	ಅಧಿಕಾರಿಗಳ ವಸತಿ ಗೃಹ	80.5	ಆರ್.ಸಿ.ಸಿ.
5.	ಮಹಿಳಾ ವಸತಿ ನಿಲಯ	215.77	ಮಂಗಳೂರು ಹೆಂಚು
6.	ಸಿಬ್ಬಂದಿ ವಸತಿ ಗೃಹಗಳು	--	ಆರ್.ಸಿ.ಸಿ.
7.	ಒಂದು ತೆರೆದ ಬಾವಿ	--	--
8.	ಒಂದು ಕೊಳವೆ ಬಾವಿ	--	--

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1400

ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಬೀದರ ಜಿಲ್ಲೆ ಬೀದರ ತಾಲ್ಲೂಕಿನಲ್ಲಿ ಸ್ಥಳಾಂತರಗೊಳ್ಳುತ್ತಿರುವ ಗೋರನಹಳ್ಳಿ ಗ್ರಾಮದಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ:ಮುಮಕಾ/2534/2010, ದಿನಾಂಕ: 07-05-2010.
2) ಸರ್ಕಾರದ ಆದೇಶ ಸಂಖ್ಯೆ:ಆಇ 23 ಟಿಎಆರ್ 2009 ದಿನಾಂಕ: 05-12-2009

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಬೀದರ ಜಿಲ್ಲೆಯ ಬೀದರ ತಾಲ್ಲೂಕು ಗೋರನಹಳ್ಳಿ ಗ್ರಾಮದಲ್ಲಿ 2009ರ ಭಾರಿ ಮಳೆಯಿಂದ ಪ್ರವಾಹಕ್ಕೊಳಗಾಗಿ ಸ್ಥಳಾಂತರಗೊಳ್ಳುತ್ತಿರುವ ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಬೀದರ ಜಿಲ್ಲಾಧಿಕಾರಿಗಳಿಗೆ ರೂ. 1.00 ಕೋಟಿ ಬಿಡುಗಡೆ ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪ್ಯಾರಾ 3 (ii) ರಲ್ಲಿ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಇವರು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ನಂತರ ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಇಂದ ಜಿಲ್ಲಾಧಿಕಾರಿಗಳನ್ನು ಬೀದರ ಜಿಲ್ಲೆ ಇವರ Miscellaneous Deposit Account-Public Contributions to the Calamity Relief Fund ಗೆ ವರ್ಗಾವಣೆ ಮಾಡುವಂತೆ ಆದೇಶಿಸಲಾಗಿದೆ. ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 212 ಟಿಎನ್‌ಆರ್ 2010 ಬೆಂಗಳೂರು, ದಿನಾಂಕ 27-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕು ಗೋರನಹಳ್ಳಿ ಗ್ರಾಮದಲ್ಲಿ ಸ್ಥಳಾಂತರಗೊಳ್ಳುತ್ತಿರುವ ಹೊಸ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಬೀದರ್ ಜಿಲ್ಲಾಧಿಕಾರಿಗಳಿಗೆ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿ ಮಾತ್ರ) ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಅಡಿಯಲ್ಲಿ ಡ್ರಾ ಮಾಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಇವರ Miscellaneous Deposit Account-Public Contributions to the Calamity Relief ಖಾತೆಗೆ ಟಿ.ಟಿ.ಆರ್ ಮೂಲಕ ವರ್ಗಾವಣೆ ಮಾಡಲು ಆದೇಶಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ ಇವರು ಪೇಯೀಸ್ ರಸೀದಿ ಬಿಲ್ಲು (ಸಿಟಿಎಸ್ – 8) ತಯಾರಿಸಿ ಮೇಲು ರುಜು ಮಾಡಿ, ಚಲನ್ ಲಗತ್ತಿಸಿ ಜಿಲ್ಲಾ ಖಜಾನೆಗೆ ಸಲ್ಲಿಸುವುದು. ಬೀದರ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು ಈ ಮೊತ್ತವನ್ನು ಮೇಲೆ ತಿಳಿಸಿದಂತೆ ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಟಿ.ಟಿ.ಆರ್. ಮೂಲಕ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳ

Miscellaneous Deposit Account-public contributions to the Calamity Relief Fund ಖಾತೆಗೆ ವರ್ಗಾವಣೆ ಮಾಡತಕ್ಕದ್ದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1401

ಟಿ. ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ಶ್ರೀ ರಂಜಾನ್ ಅಲಿ, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಜಿಲ್ಲೆ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

ಓದಲಾಗಿದೆ :

1) ಜಿಲ್ಲಾಧಿಕಾರಿಗಳು, (ಆಹಾರ) ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಪತ್ರ ಸಂ: ಅನಾಸ:6:ಸಿಬ್ಬಂದಿ:3:99–2000, ದಿನಾಂಕ: 26.07.1999.
2) ಸರ್ಕಾರದ ತಿಳುವಳಿಕೆ ಪತ್ರ ಸಂ: ಆರ್‌ಡಿ 40 ಎಡಿಇ 99, ದಿನಾಂಕ: 26.07.1999.
3) ಶ್ರೀ ರಂಜಾನ್ ಅಲಿಯವರ ದಿನಾಂಕ: 03.08.99ರ ಲಿಖಿತ ಉತ್ತರ.
4) ಜಿಲ್ಲಾಧಿಕಾರಿಗಳು, (ಆಹಾರ) ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರ ಪತ್ರ ಸಂ: ಅನಾಸ:3:ಸಿಬ್ಬಂದಿ:3:99–2000, ದಿನಾಂಕ: 18.09.2003.
5) ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ದಿನಾಂಕ: 23–03–05ರ ಪತ್ರ ಸಂ: ಸಿಎಫ್‌ಎಸ್/ಇಎಸ್‌ಟಿ(2)70/99–2000.
6) ಸರ್ಕಾರದ ಆದೇಶ ಸಂ:ಆರ್‌ಡಿ 40 ಎಡಿಇ 99, ದಿನಾಂಕ: 05–01–2006.

ಪ್ರಸ್ತಾವನೆ :

ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿರುವ ಪಡಿತರ ಕಾರ್ಡುದಾರರಿಗೆ ಸೀಮೆಎಣ್ಣೆಯ ವಿತರಣೆಯ ಪ್ರಮಾಣದ ಬಗ್ಗೆ ಪ್ರತಿ ತಿಂಗಳು ಆಹಾರ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿಯ ಮಾಸಿಕ ಸಭೆಯಲ್ಲಿ ಪ್ರತಿ ಕಾರ್ಡಿಗೆ ವಿತರಣೆ ಮಾಡಬೇಕಾದ ಪ್ರಮಾಣವನ್ನು ನಿರ್ಧರಿಸಿ ಅದರಂತೆ ಲಿಖಿತ ಹಂಚಿಕೆ ಆದೇಶವನ್ನು ಆಯಾ ತಾಲ್ಲೂಕಿಗೆ ತಿಳಿಸುತ್ತಾ ಬಂದಿರುವುದಾಗಿ, ಆದರೆ ಸದರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಕಾರ್ಡುದಾರರಿಗೆ ನಿಗದಿತ ಪ್ರಮಾಣದಂತೆ ಸೀಮೆಎಣ್ಣೆಯನ್ನು ಪೂರೈಸುತ್ತಿಲ್ಲವೆಂಬ ಬಗ್ಗೆ ಸದರಿ ತಾಲ್ಲೂಕಿನ ಸಾರ್ವಜನಿಕರಿಂದ ಸ್ವೀಕರಿಸಿದ ದೂರು ಅರ್ಜಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಸತ್ಯಾಂಶವಿರುವುದು ಕಂಡುಬಂದಿರುವುದರಿಂದ ಸದರಿ ತಾಲ್ಲೂಕಿನ ಅಂದಿನ ತಹಶೀಲ್ದಾರರಾದ ಶ್ರೀ ರಂಜಾನ್ ಅಲಿಯವರ ಕರ್ತವ್ಯ ನಿರ್ಲಕ್ಷತೆ ಹಾಗೂ ಅಧಿಕಾರ ದುರುಪಯೋಗದ ಬಗ್ಗೆ ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸುವಂತೆ ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 26–07–99ರ ಪತ್ರದಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿರುತ್ತಾರೆ.

ಅದರಂತೆ, ಆಪಾದಿತ ಅಧಿಕಾರಿ ಶ್ರೀ ರಂಜಾನ್ ಅಲಿ ರವರಿಗೆ ಅವರ ವಿರುದ್ಧದ ದೋಷಾರೋಪಣೆ ಪಟ್ಟಿಗಳೊಂದಿಗೆ ಮೇಲೆ ಕ್ರ.ಸಂ. (2)ರಲ್ಲಿ ಓದಲಾಗಿರುವ ದಿನಾಂಕ: 22–07–99 ರ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಿ, ಆ ಬಗ್ಗೆ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದಕ್ಕೆ ಸದರಿ ಅಧಿಕಾರಿ ಸಲ್ಲಿಸಿರುವ ಮೇಲೆ ಕ್ರ.ಸಂ. (3)ರಲ್ಲಿ ಓದಲಾಗಿರುವ ದಿನಾಂಕ: 03–08–99ರ ಲಿಖಿತ ಉತ್ತರದಲ್ಲಿ ಅವರ ವಿರುದ್ಧದ ಆರೋಪಗಳನ್ನು ಸಾರಾಸಗಟಾಗಿ ಅಲ್ಲಗಳೆದಿದ್ದು, ಈ ಪ್ರಕರಣದಲ್ಲಿ ಆಹಾರ ಇಲಾಖೆಯ ಸಿಬ್ಬಂದಿಯೇ ನೇರ ಹೊಣೆಗಾರರಾಗಿರುತ್ತಾರೆಂದು, ಆದುದರಿಂದ ಅವರನ್ನು ಆರೋಪ ಮುಕ್ತರಾಗಿಸುವಂತೆ ಕೋರಿರುತ್ತಾರೆ. ಆಹಾರ ಇಲಾಖೆಯ ಇತರೆ ಸಿಬ್ಬಂದಿಯ ಪಾತ್ರದ ಬಗ್ಗೆ ಬಳ್ಳಾರಿ ಜಿಲ್ಲಾಧಿಕಾರಿಗಳ ಅಭಿಪ್ರಾಯವನ್ನು ಕೇಳಲಾಗಿ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರ ದಿನಾಂಕ: 01–12–99ರ ಪತ್ರ ಸಂ: ಸಿಎಫ್‌ಎಸ್/ಇಎಸ್‌ಟಿ (2)70/99–2000ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಛೇರಿಯ ತಹಶೀಲ್ದಾರ್, ಆಹಾರ ಶಿರಸ್ತೇದಾರ್ ಮತ್ತು ಆಹಾರ ನಿರೀಕ್ಷಕರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ಮೂಲ ದಾಖಲೆಗಳೊಂದಿಗೆ ದಿನಾಂಕ: 18–01–2000 ದ ಪತ್ರ ಸಂ: ಅನಾಸೆ/3/ಸಿಬ್ಬಂದಿ/3/99–2000 ರೊಂದಿಗೆ ಆಹಾರ ಇಲಾಖೆಯ ಆಯುಕ್ತರಿಗೆ ಸಲ್ಲಿಸಿರುವುದಾಗಿ ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ದಿನಾಂಕ: 18–09–2003ರ ಪತ್ರದಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ಪ್ರಕರಣದಲ್ಲಿ ತಹಶೀಲ್ದಾರರನ್ನೊಳಗೊಂಡಂತೆ ಜಂಟಿ ಇಲಾಖಾ ವಿಚಾರಣೆ ಬಗ್ಗೆ ಅಗತ್ಯ ಮಾಹಿತಿಯನ್ನು ಕಂದಾಯ ಇಲಾಖೆಗೆ ಒದಗಿಸುವಂತೆ ಸಚಿವಾಲಯದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯನ್ನು ಹಾಗೂ ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರನ್ನು ಹಲವಾರು ಅರೆ ಸರ್ಕಾರಿ ಪತ್ರಗಳ ಮೂಲಕ ಕೋರಲಾಗಿತ್ತು. ದೀರ್ಘ ಪತ್ರ ವ್ಯವಹಾರದ ನಂತರ ಈ ಪ್ರಕರಣದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂದಿನ ಆಹಾರ ಶಿರಸ್ತೇದಾರ್ ಮತ್ತು ಆಹಾರ ನಿರೀಕ್ಷಕರ ವಿರುದ್ಧ ಮಾತ್ರ ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಿ ಆ ಬಗ್ಗೆ ದಿನಾಂಕ: 03–10–02 ರಂದು ಅಂತಿಮ ಆದೇಶವನ್ನು ಹೊರಡಿಸಿರುವುದಾಗಿ ಉಳಿದಂತೆ ತಹಶೀಲ್ದಾರರ ವಿರುದ್ಧ ಕ್ರಮ ಜರುಗಿಸುವಂತೆ ಬಳ್ಳಾರಿ ಜಿಲ್ಲಾಧಿಕಾರಿಗಳೂ ಸರ್ಕಾರದ ಕಾರ್ಯದರ್ಶಿ ಕಂದಾಯ ಇಲಾಖೆ ಇವರಿಗೆ ಪತ್ರ ಬರೆದಿರುವುದರಿಂದ, ಸದರಿ ತಹಶೀಲ್ದಾರರು ಆಹಾರ ಇಲಾಖೆಯ ವ್ಯಾಪ್ತಿಗೆ ಒಳಪಡದಿರುವುದರಿಂದ ಹಾಗೂ ಸದರಿ ತಹಶೀಲ್ದಾರರಿಗೆ ಸರ್ಕಾರದ ಕಂದಾಯ ಇಲಾಖೆಯ ದೋಷಾರೋಪಣಾ ಪಟ್ಟಿ ಹೊರಡಿಸಿರುವುದರಿಂದ ಆಹಾರ ಇಲಾಖೆಯಿಂದ ಸದರಿ ತಹಶೀಲ್ದಾರರ ವಿರುದ್ಧ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ಮೇಲೆ ಕ್ರ.ಸಂ.(5)ರಲ್ಲಿ ಓದಲಾದ ದಿನಾಂಕ: 23–03–2005ರ ಪತ್ರದಲ್ಲಿ ಆಹಾರ ಇಲಾಖೆಯ ಆಯುಕ್ತರು ವರದಿ ಮಾಡಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(6)ರ ದಿನಾಂಕ: 05–01–2006ರ ಆದೇಶದಲ್ಲಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರಡಿಯಲ್ಲಿ ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 214ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ರಂಜಾನ್ ಅಲಿ, ಹಿಂದಿನ ತಹಶೀಲ್ದಾರ್ ಹಗರಿಬೊಮ್ಮನಹಳ್ಳಿ ತಾಲ್ಲೂಕು, ಪ್ರಸ್ತುತ ನಿವೃತ್ತರು ಇವರ ವಿರುದ್ಧ ಹೊರಿಸಲಾದ ಆರೋಪಗಳ ಕುರಿತು ಇಲಾಖಾ ವಿಚಾರಣೆ ನಡೆಸಲು, ಶ್ರೀ ಕುಲಕರ್ಣಿ ರಾಮರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುರುವಿಹಾಳ್ ಅಂಚೆ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯ ಕೇಂದ್ರ ಸ್ಥಾನಿಕ ಸಹಾಯಕರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿತ್ತು.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಮಧುಮೇಹದಿಂದ ನರಳುತ್ತಿದ್ದು, ಕಣ್ಣಿನ ಆಪರೇಷನ್ ಆಗಿದ್ದು, ಕಣ್ಣುಗಳು ಸರಿಯಾಗಿ ಕಾಣಿಸುತ್ತಿಲ್ಲವೆಂದು, ಓದಲು ಮತ್ತು ಬರೆಯಲು ಸಾಧ್ಯವಾಗುತ್ತಿಲ್ಲವೆಂದು, ವಿಚಾರಣೆಯ ವರದಿಯನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲವೆಂದು ದೂರವಾಣಿ ಮೂಲಕ ತಿಳಿಸಿರುತ್ತಾರೆ. ಆಪಾದಿತರ ವಿರುದ್ಧ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಗಮನಿಸಲಾಗಿ, ಶ್ರೀ ರಂಜಾನ್ ಅಲಿ, ಹಗರಿಬೊಮ್ಮನಹಳ್ಳಿಯಲ್ಲಿ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಸೀಮೆ ಎಣ್ಣೆ ಹಂಚಿಕೆಯ ವ್ಯವಸ್ಥೆಯನ್ನು ಸರಿಪಡಿಸದೇ ಕಾರ್ಡುಗಳನ್ನು ವಿತರಿಸದೇ ನ್ಯೂನತೆಗಳನ್ನು ಸರಿಪಡಿಸುವ ಅಧಿಕಾರ ಹೊಂದಿದ್ದರೂ, ಸರ್ಕಾರಿ ಕರ್ತವ್ಯದಲ್ಲಿ ಲೋಪವೆಸಗಿರುತ್ತಾರೆ. ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಕಾರ್ಡುದಾರರಿಗೆ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಏನಾದರೂ ವ್ಯತ್ಯಯವಾಗುತ್ತಿದ್ದಲ್ಲಿ ತಕ್ಷಣವೇ ಅಂತಹ ನ್ಯೂನತೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಆದೇಶ ಪಡೆದು ಸಾರ್ವಜನಿಕ ಆಡಳಿತ ಸುಗಮಗೊಳಿಸುವುದು ಜವಾಬ್ದಾರಿಯುತ ಅಧಿಕಾರಿಗಳ ಕರ್ತವ್ಯವಾಗಿದ್ದು, ಆದರೆ ಸದರಿ ಪ್ರಕರಣದಲ್ಲಿ ತಹಶೀಲ್ದಾರರು ತಾವೇ ತಮ್ಮ ಮನಸ್ಸಿಗೆ ಬಂದಂತೆ ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ವ್ಯತಿರಿಕ್ತ ನಿರ್ಣಯಗಳನ್ನು ತೆಗೆದುಕೊಂಡು ಸಾರ್ವಜನಿಕ ವಿತರಣಾ ಪದ್ಧತಿಯ ವೈಫಲ್ಯಕ್ಕೆ ಕಾರಣಭೂತರಾಗಿರುತ್ತಾರೆಂದು ತಿಳಿಸಿ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಕೋರಿದ್ದರು. ಅವರ ವಿರುದ್ಧ ಮಾಡಿದ ಆಪಾದನೆಗಳು ಕರ್ತವ್ಯ ಲೋಪಕ್ಕೆ ಸಂಬಂಧಿಸಿದ್ದು, ಹಣಕಾಸಿನ ದುರುಪಯೋಗದ ಬಗ್ಗೆ ಆಪಾದನೆಗಳು ಇರುವುದಿಲ್ಲ. ಈ ಪ್ರಕರಣ ನಡೆದು ಈಗಾಗಲೇ 11 ವರ್ಷಗಳಾಗಿದ್ದು, ಈಗ ಈ ಪ್ರಕರಣದಲ್ಲಿ ಇಷ್ಟು ವರ್ಷಗಳ ನಂತರ ಸಾಕ್ಷಿಗಳನ್ನು ಹೊಂದಿಸಿ, ಆಪಾದನೆಗಳನ್ನು ರುಜುವಾತುಪಡಿಸಲು ಕಷ್ಟಸಾಧ್ಯದ ಕೆಲಸವಾದ್ದರಿಂದ, ಸರ್ಕಾರವು ವಿಚಾರಣೆಯನ್ನು ಕೈಬಿಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 40 ಎಡಿಇ 1999, ಬೆಂಗಳೂರು, ದಿನಾಂಕ 28–05–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ರಂಜಾನ್ ಅಲಿ ಖಾನ್, ಹಿಂದಿನ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ, ಇಲಾಖಾ ವಿಚಾರಣೆ ಪ್ರಕರಣದಲ್ಲಿ, ಸರ್ಕಾರಕ್ಕೆ ಯಾವುದೇ ಹಣಕಾಸಿನ ದುರುಪಯೋಗವಾಗಿಲ್ಲದ ಕಾರಣ, ಸರ್ಕಾರವು ಸದರಿಯವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಬಿಟ್ಟು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1402

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ,
(ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು, ಕೆಸಗಾನಹಳ್ಳಿ ಗ್ರಾಮದ ಸ.ನಂ. 135 ರಲ್ಲಿ 10 ಗುಂಟೆ ಹಾಗೂ ಹೆಗ್ಗದ್ದೆ ಸ.ನಂ. 682 ರಲ್ಲಿ 4 ಎಕರೆ ಜಮೀನನ್ನು ಮೈಸೂರು ಮರ್ಕಂಟೈಲ್ ಕಂಪನಿಗೆ ಇವರಿಗೆ ಕಿರು ಜಲ ವಿದ್ಯುತ್ ಯೋಜನೆಗಾಗಿ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಇಎನ್ 452 ಎನ್‌ಸಿಇ 2007, ದಿನಾಂಕ: 13.03.2008

2) ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (2) 209/2008–09, ದಿನಾಂಕ 03.09.2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರದ ಆದೇಶ ದಿನಾಂಕ 13.03.2008ರಲ್ಲಿ ಮೈಸೂರು ಮರ್ಕಂಟೈಲ್ ಕಂಪನಿ ಲಿಮಿಟೆಡ್‌ಗೆ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದೊಡ್ಡತಪಲೆ ಗ್ರಾಮದ ಬಳಿ ಎತ್ತಿನಹೊಳೆಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 1 ಮೆಗಾ ವ್ಯಟ್ ಸಾಮರ್ಥ್ಯದ ಒಡ್ಡತಪಲೆ ಕಿರು ಜಲವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 3 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನಗೊಳಿಸಲು ಹಲವು ನಿಬಂಧನೆಗೊಳಪಟ್ಟು ಸರ್ಕಾರದ ಅನುಮತಿಯನ್ನು ನೀಡಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿ 03.09.2009ರ ಪತ್ರದಲ್ಲಿ ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು, ಕೆಸಗಾನಹಳ್ಳಿ ಗ್ರಾಮದ ಸ.ನಂ. 135ರಲ್ಲಿ 10 ಗುಂಟೆ ಹಾಗೂ ಹೆಗ್ಗದೆ ಗ್ರಾಮದ ಸ.ನಂ. 682ರಲ್ಲಿ 4 ಎಕರೆ ಜಮೀನನ್ನು ಮೈಸೂರು ಮರ್ಕಂಟೈಲ್ ಕಂಪನಿಗೆ 3 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲವಿದ್ಯುತ್ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ವರದಿಯನ್ವಯ ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು, ಕಸಬಾ ಹೋಬಳಿ, ಕೆಸಗಾನಹಳ್ಳಿ ಗ್ರಾಮದ ಸ.ನಂ. 135 ರಲ್ಲಿ ಒಟ್ಟು 5.18 ಎಕರೆ ಜಮೀನಿದ್ದು, ಸರ್ಕಾರಿ ಗೋಮಾಳ ಇಂದು ವರ್ಗೀಕರಿಸಿರುತ್ತದೆ. ಈ ಪೈಕೆ 10 ಗುಂಟೆ ಪ್ರದೇಶದಲ್ಲಿ ಮೈಸೂರು ಮರ್ಕಂಟೈಲ್ ಕಂಪನಿ ಇವರು ಕಿರು ಜಲವಿದ್ಯುತ್ ಯೋಜನೆಗಾಗಿ ಅಡಿಪಾಯ ತೆಗೆದು ಗೋಡೆಯನ್ನು ನಿರ್ಮಿಸಿರುತ್ತಾರೆ. ಈ ಗ್ರಾಮದಲ್ಲಿ ಒಟ್ಟು 141 ಜಾನುವಾರುಗಳಿದ್ದು, ಸದರಿ ಜಾನುವಾರುಗಳಿಗನುಸಾರವಾಗಿ ಸಾಕಷ್ಟು ಗೋಮಾಳ ಜಮೀನು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಕಲೇಶಪುರ ತಾಲ್ಲೂಕು, ಹೆಗ್ಗದೆ ಗ್ರಾಮದ ಸ.ನಂ. 682 ರಲ್ಲಿ ಒಟ್ಟು 4 ಎಕರೆ ಜಮೀನಿದ್ದು, ಸರ್ಕಾರಿ ಗೋಮಾಳ ಎಂದು ವರ್ಗೀಕರಿಸಿರುತ್ತದೆ. ಈ ಜಮೀನಿನಲ್ಲಿ ಕಂಪನಿಯವರು ಜಲ ವಿದ್ಯುತ್ ಯೋಜನೆಗಾಗಿ ಪಂಪ್ ಹೌಸ್ ನಿರ್ಮಿಸಲು ಅಡಿಪಾಯ ಹಾಗೂ ಪೈಪ್‌ಲೈನ್ ಕಾಲುವೆ ನಿಮಿಸಿರುತ್ತಾರೆ. ಈ ಗ್ರಾಮದಲ್ಲಿ ಒಟ್ಟು 1100 ಜಾನುವಾರುಗಳಿದ್ದು, ಸದರಿ ಜಾನುವಾರುಗಳಿಗನುಸಾರವಾಗಿ ಸಾಕಷ್ಟು ಗೋಮಾಳ ಜಮೀನು ಲಭ್ಯವಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ,

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 62 ಎಲ್‌ಜಿಹೆಚ್ 2009, ಬೆಂಗಳೂರು, ದಿನಾಂಕ 28–05–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು, ಕಸಬಾ ಹೋಬಳಿ, ಕೆಸಗಾನಹಳ್ಳಿ ಗ್ರಾಮದ ಸ.ನಂ. 135ರಲ್ಲಿ 0.10 ಗುಂಟೆ ಹಾಗು ಹೆಗ್ಗದ್ದೆ ಗ್ರಾಮದ ಸ. ನಂ. 682 ರಲ್ಲಿ 4 ಎಕರೆ, ಒಟ್ಟು 4.10 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97(4)ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಸದರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19ರನ್ವಯ ಸದರಿ ಜಮೀನಿಗೆ ಪ್ರಚಲಿತ ಮಾರುಕಟ್ಟೆ ದರ ಆಧರಿಸಿ ಗುತ್ತಿಗೆ ದರ ನಿಗದಿ ಪಡಿಸಿ, ಪ್ರತಿ ಎರಡು ವರ್ಷಗಳಿಗೊಮ್ಮೆ ಶೇ 10 ರಷ್ಟು ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತು ವಿಧಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕೆಆರ್‌ಇಡಿಎಲ್ ಮುಖಾಂತರ ಮೈಸೂರು ಮರ್ಕಂಟೈಲ್ ಕಂಪನಿ ಇವರಿಗೆ 3 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲವಿದ್ಯುತ್ ಯೋಜನೆಗಾಗಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1403

ಇ. ಈಶ್ವರ ನಾಯಕ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂ.ಮಂ).

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : ಮುದಗಲ್ಲು ಸರ್ಕಾರಿ ಪ್ರಥಮ ದರ್ಜೆ **ಕಾಲೇಜಿನ** ಹೆಸರನ್ನು "ಶ್ರೀಮತಿ ಪದ್ಮಾವತಿಬಾಯಿ ರಾಘವೇಂದ್ರ ದೇಶಪಾಂಡೆ ಪಿಕಳಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು" ಎಂದು ನಾಮಕರಣ ಮಾಡುವ ಬಗ್ಗೆ.

ಓದಲಾಗಿದೆ : ಕಾಲೇಜು ಶಿಕ್ಷಣ ನಿರ್ದೇಶಕರವರ ಪತ್ರ ಸಂಖ್ಯೆ ಕಾಶಿಇ 138 ಯೋಜನೆ 2007–08 ದಿನಾಂಕ 17–08–2009.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ರಾಯಚೂರು ಜಿಲ್ಲೆ ಲಿಂಗಸೂರು ತಾಲ್ಲೂಕಿನ ಮುದಗಲ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಡಾ॥ ಗುರುರಾಜು ದೇಶಪಾಂಡೆ 3.00 ಎಕರೆ 4 ಕುಂಟೆ ಜಮೀನನ್ನು ದಾನವಾಗಿ ನೀಡಿದ್ದು ಕಾಲೇಜಿಗೆ ಅವರ ಅಪೇಕ್ಷೆಯಂತೆ "ಶ್ರೀಮತಿ ಪದ್ಮಾವತಿಬಾಯಿ ರಾಘವೇಂದ್ರ ದೇಶಪಾಂಡೆ ಪಿಕಳಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು" ಎಂದು ನಾಮಕರಣ ಮಾಡಿ ಆದೇಶ ಹೊರಡಿಸುವಂತೆ ನಿರ್ದೇಶಕರು, ಕಾಲೇಜು ಶಿಕ್ಷಣ ಇವರು ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 383 ಯೋಯೋಕ 2009 ಬೆಂಗಳೂರು, ದಿನಾಂಕ 31–05–2010

ರಾಯಚೂರು ಜಿಲ್ಲೆ ಲಿಂಗಸೂರು ತಾಲ್ಲೂಕಿನ ಮುದಗಲ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ ಡಾ॥ ಗುರುರಾಜು ದೇಶಪಾಂಡೆ 3.00 ಎಕರೆ 4 ಕುಂಟೆ ಜಮೀನನ್ನು ದಾನವಾಗಿ ನೀಡಿದ್ದು ಅವರ ಅಪೇಕ್ಷೆಯಂತೆ ಕಾಲೇಜಿಗೆ "ಶ್ರೀಮತಿ ಪದ್ಮಾವತಿಬಾಯಿ ರಾಘವೇಂದ್ರ ದೇಶಪಾಂಡೆ ಪಿಕಳಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು" ಎಂದು ನಾಮಕರಣ ಮಾಡಲು ಸರ್ಕಾರಿ ಆದೇಶ ಸಂಖ್ಯೆ ಇಡಿ 51 ಯೊಸಕ 89 ಬೆಂಗಳೂರು ದಿನಾಂಕ 30–8–1989 ರ ಆದೇಶಕ್ಕೆ ಷರತ್ತಿಗೊಳಪಟ್ಟು ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1404

ಐ.ಎಫ್. ಮಾಗಿ
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಕಂದಾಯ ಸಚಿವಾಲಯ

ತಿದ್ದುಪಡಿ

ಆರ್‌ಡಿ 14 ಎಡಿಇ 2010, ಬೆಂಗಳೂರು, ದಿನಾಂಕ 29ನೇ ಮೇ, 2010

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 14 ಎಡಿಇ 2010, ದಿನಾಂಕ 25–03–2010ರ ಆದೇಶದಲ್ಲಿ ಓದಲಾಗಿದೆ ಎಂಬ ಉಲ್ಲೇಖದಲ್ಲಿ, ಉಪನಿಬಂಧಕರು/ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರ ಪತ್ರ ಸಂ. : ಕಂಪ್ಲೆಂಟ್/ಉಪಲೋಕ್/ಎಂವೈಎಸ್–2/2007/ಪಿಪಿ, ದಿನಾಂಕ 23–11–2009 ಎಂದು ನಮೂದಾಗಿದ್ದು, ಅದರ ಬದಲಿಗೆ ಉಪನಿಬಂಧಕರು/ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಪತ್ರ ಸಂ. : ಕಂಪ್ಲೆಂಟ್/ಉಪಲೋಕ್/ಬಿಜಿಎಂ–2/2007/ಡಿಆರ್‌ಇ–1 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1501

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಸರ್ಕಾರಿ ಹಣ ದುರುಪಯೋಗ ಪಡಿಸಿಕೊಂಡಿರುವುದನ್ನು ವಸೂಲು ಮಾಡುವ ಬಗ್ಗೆ.

ಓದಲಾಗಿದೆ :
1) ಕೈಗಾರಿಕಾಭಿವೃದ್ಧಿ ಆಯುಕ್ತರು, ಇವರ ಪತ್ರದ ಸಂಖ್ಯೆ : ಕೈವಾಇ/ನಿರೀ–2/ನ್ಯಾ/11/1999–2000, ದಿನಾಂಕ 06–01–2010.
2) ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ : ಕೈವಾಇ/ನಿರೀ–2/ನ್ಯಾ/11/1999–2000, ದಿನಾಂಕ 09–03–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಹುಣಸೂರು ಗ್ರಾಮದಲ್ಲಿ ಹೊಂದಿರುವ ಆಸ್ತಿಯ ವಿವರಗಳನ್ನು ಒದಗಿಸಿರುತ್ತಾರೆ. ಉಪನೋಂದಣಾಧಿಕಾರಿಗಳು, ಟಿ. ನರಸೀಪುರ ರವರು ದಿನಾಂಕ 07-12-2009ರ ಪತ್ರದಲ್ಲಿ ಶ್ರೀ ಆರ್. ಬಸವಣ್ಣರವರ ಹೆಸರಿನಲ್ಲಿ ಖಾತೆ ನಂ. 53-54ರಲ್ಲಿ 50x45 ಅಡಿ ಅಳತೆಯುಳ್ಳ ನಿವೇಶನವನ್ನು ಹೊಂದಿರುವುದಾಗಿ ತಿಳಿಸಿ, ಸದರಿ ನಿವೇಶನವನ್ನು ಸರ್ಕಾರಕ್ಕೆ ಅಡಮಾನ ಇಟ್ಟಿರುತ್ತಾರೆಂದು ಹಾಗೂ ಋಣಭಾರಗಳ ಪ್ರಮಾಣ ಪತ್ರದ ಪ್ರತಿಯನ್ನು ಸಹ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದುದರಿಂದ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಹಣವನ್ನು ಭೂ ಕಂದಾಯ ಬೇ ಬಾಕಿ ಅಡಿಯಲ್ಲಿ ಕ್ರಮ ವಹಿಸಲು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ರವರಿಗೆ ಸೂಕ್ತ ನಿರ್ದೇಶನವನ್ನು ನೀಡಲು ಋಣಭಾರ ಪ್ರಮಾಣ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು 1985ರಲ್ಲಿ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಸಹಾಯಕ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಸರ್ಕಾರಿ ಹಣ ರೂ. 2,50,900/- (ಎರಡು ಲಕ್ಷದ ಐವತ್ತು ಸಾವಿರದ ಒಂಭೈನೂರು ಮಾತ್ರ) ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲಾಗಿತ್ತು ಹಾಗು ಸದರಿ ಪ್ರಕರಣದ ಬಗ್ಗೆ ಅಂದಿನ ಜಂಟಿ ನಿರ್ದೇಶಕರು, ಧಾರವಾಡ ರವರು ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಹ ದಾಖಲಿಸಿದ್ದರು.

ವಿಚಾರಣೆಯನ್ನು ನಡೆಸಲು ಸರ್ಕಾರಿ ಆದೇಶ ಸಂಖ್ಯೆ : ಸಿಐ 183 ಐಸಿಎಸ್ 85, ದಿನಾಂಕ 12-03-1991ರಲ್ಲಿ ವಿಚಾರಣಾಧಿಕಾರಿಯನ್ನಾಗಿ ಶ್ರೀ ಬಿ. ಎನ್. ವಿಜಯಕುಮಾರ್, ಅಧಿಕ ನಿರ್ದೇಶಕರು ಹಾಗೂ ಮಂಡನಾಧಿಕಾರಿಯನ್ನಾಗಿ ಶ್ರೀ ಚಂದ್ರಶೇಖರ್, ಉಪ ನಿರ್ದೇಶಕರು, ಇವರನ್ನು ನೇಮಿಸಲಾಗಿತ್ತು.

ತದನಂತರ, ಶ್ರೀ ಆರ್. ಬಸವಣ್ಣರವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಬರುವುದಿಲ್ಲವೆಂದು ತಿಳಿಸಲಾಗಿದೆ. ಕ್ರಿಮಿನಲ್ ಕೇಸ್ ಸಂಖ್ಯೆ : 59/1988ಕ್ಕೆ ಸಂಬಂಧಿಸಿದಂತೆ ದಿನಾಂಕ 22-08-1995ರ ಆದೇಶದಲ್ಲಿ ಆಪಾದಿತರಿಗೆ ಆರು ತಿಂಗಳುಗಳ ಕಾಲ ಸಾಧಾರಣ ಜೈಲು ಶಿಕ್ಷೆ ಮತ್ತು ರೂ. 5,000/- (ರೂಪಾಯಿ ಐದು ಸಾವಿರಗಳು ಮಾತ್ರ) ಗಳ ದಂಡವನ್ನು ವಿಧಿಸಲಾಗಿದೆ. ಸದರಿ ಪ್ರಕರಣದ ಬಗ್ಗೆ ಮೂರನೇ ಅಡಿಷನಲ್ ಸಿವಿಲ್ ಜಡ್ಜ್ ಹಾಗೂ ಸಿ.ಜೆ.ಎಮ್. ಧಾರವಾಡ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ : 101/1991ಕ್ಕೆ ಸಂಬಂಧಿಸಿದಂತೆ ದಿನಾಂಕ 21-10-2000 ರಲ್ಲಿ ಆಪಾದಿತ ನೌಕರರಿಂದ ರೂ. 2,50,900/-(ರೂಪಾಯಿ ಎರಡು ಲಕ್ಷದ ಐವತ್ತು ಸಾವಿರದ ಒಂಭೈನೂರು ಮಾತ್ರ) ಗಳ ಮೊತ್ತವನ್ನು 1985 ರಿಂದ ಪೂರ್ತಿಯಾಗಿ ವಸೂಲು ಆಗುವ ದಿನಾಂಕದವರೆಗೂ ಶೇ. 18 ರಂತೆ ಬಡ್ಡಿಯೊಂದಿಗೆ ವಸೂಲು ಮಾಡಲು ತೀರ್ಪು ನೀಡಿರುತ್ತಾರೆ.

ಶ್ರೀ ಆರ್. ಬಸವಣ್ಣ, ಸಹಾಯಕ ನಿರ್ದೇಶಕರು (ವಜಾ) ಇವರ ವಿರುದ್ಧ ವಿಚಾರಣೆ ನಡೆಸಲು ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವುದರಿಂದ ಪ್ರಕರಣವನ್ನು ಕೈಬಿಡಲಾಗಿದೆ ಮತ್ತು ಸದರಿಯವರ ಹೆಸರಿನಲ್ಲಿ ಆಸ್ತಿ-ಪಾಸ್ತಿಗಳಿದ್ದ ಪಕ್ಷದಲ್ಲಿ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಕ್ರಮ ವಹಿಸಲಾಗಿದೆಯೆಂದು ಕೈಗಾರಿಕಾ ನಿರ್ದೇಶನಾಲಯ ಉಲ್ಲೇಖ (2)ರ ಪತ್ರದಲ್ಲಿ ವರದಿಸಿರುತ್ತದೆ.

ಇದಲ್ಲದೆ, ಇಲಾಖೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಅವರ ಹೆಸರಿನಲ್ಲಿ ಹುಣಸೂರು, ಟಿ. ನರಸೀಪುರ ತಾಲ್ಲೂಕಿನಲ್ಲಿ ಖಾತೆ ನಂಬರ್ 53/54ರಲ್ಲಿ ಗೃಹ ನಿರ್ಮಾಣ ಮಾಡಲು ರೂ. 14,000/-(ರೂಪಾಯಿ ಹದಿನಾಲ್ಕು ಸಾವಿರ ಮಾತ್ರ) ಗಳನ್ನು ಗೃಹ ಮುಂಗಡವಾಗಿ ಆಸ್ತಿಯನ್ನು ದಿನಾಂಕ 20-01-1972 ರಂದು ಸರ್ಕಾರಕ್ಕೆ ಅಡವಿಟ್ಟು ಸಾಲವನ್ನು ಪಡೆದಿರುತ್ತಾರೆ. ಈ ಸಾಲದಲ್ಲಿ ಇದುವರೆಗೂ ರೂ. 1,326.00 (ಒಂದು ಸಾವಿರದ ಮುನ್ನೂರು ಇಪ್ಪತ್ತಾರು ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರಿ ಸೇವೆಯಿಂದ ವಜಾ ಆಗುವವರೆಗೂ ವಸೂಲು ಮಾಡಲಾಗಿರುತ್ತದೆ. ಉಳಿದ ಹಣವನ್ನು ಬಡ್ಡಿ ಸಹಿತ ವಸೂಲಾತಿ ಮಾಡಬೇಕಾಗಿರುತ್ತದೆ ಸದರಿಯವರನ್ನು ಸರ್ಕಾರಿ ಆದೇಶ ಸಂಖ್ಯೆ : ವಾಕೈ 183 ಕೈಸೇವಿ 1985, ದಿನಾಂಕ 07-01-1997ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

ಈ ಬಗ್ಗೆ ಹಿರಿಯ ಉಪ ನೋಂದಣಾಧಿಕಾರಿ ಟಿ. ನರಸೀಪುರರವರಿಂದ ಮಾಹಿಸಿ ಪಡೆಯಲಾಗಿ ಹುಣಸೂರು ಗ್ರಾಮದ ಖಾತೆ ನಂಬರ್ 53/54ರಲ್ಲಿ 50x45 ಅಡಿ ಅಳತೆಯ ನಿವೇಶನವನ್ನು ಸರ್ಕಾರಕ್ಕೆ ರೂ. 14,000/-ಗಳಿಗೆ ಅಡಮಾನವಿಟ್ಟಿರುವುದಾಗಿ ಹಾಗೂ ಇದುವರೆವಿಗೂ ಈ ಆಸ್ತಿಯ ಮೇಲೆ ಬೇರೆ ಯಾವುದೇ ವಹಿವಾಟು ನಡೆದಿಲ್ಲವೆಂದು ಅವರ ಪತ್ರದ ದಿನಾಂಕ 07-12-2009 ರಲ್ಲಿ ತಿಳಿಸಿ ಆಸ್ತಿಯ ಮೇಲಿನ ಋಣಭಾರಗಳ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರಾದ ಶ್ರೀ ಆರ್. ಬಸವಣ್ಣ, ಸಹಾಯಕ ನಿರ್ದೇಶಕರು ರವರನ್ನು ನ್ಯಾಯಾಲಯದ ತೀರ್ಪನ್ನು ಆಧರಿಸಿ ಸರ್ಕಾರಿ ಆದೇಶ ಸಂಖ್ಯೆ : ವಾಕ್ಕೆ 183 ಕೈಸೇವಿ 85, ದಿನಾಂಕ 07–01–1997ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

ಆಪಾದಿತ ನೌಕರರಿಂದ ಗೃಹ ಸಾಲದ ಮುಂಗಡದಲ್ಲಿ ಬಾಕಿಯಿರುವ ಹಣವನ್ನು ಹಾಗೂ ನ್ಯಾಯಾಲಯದ ತೀರ್ಪಿನ ಅನ್ವಯ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಹಣ ರೂ. 2,50,900/–ಗಳನ್ನು ಬಡ್ಡಿ ಸಮೇತ ವಸೂಲು ಮಾಡಬೇಕಾಗಿರುತ್ತದೆ. ಸದರಿ ವಿಷಯವು ಮಹಾಲೇಖಪಾಲರ ಆಡಿಟ್ ವರದಿಯಲ್ಲಿ 2001–03 ರಿಂದ ಆಕ್ಷೇಪಣೆಯಲ್ಲಿರುತ್ತದೆ. ಈ ಎಲ್ಲ ಅಂಶಗಳತ್ತ ಗಮನ ಸೆಳೆದು ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರ ಹೆಸರಿನಲ್ಲಿ ಇರುವ ಆಸ್ತಿಯನ್ನು ಭೂ ಕಂದಾಯ ಬೇ ಬಾಕಿ ಅಡಿಯಲ್ಲಿ ವಸೂಲಾತಿಗೆ ಆದೇಶಿಸಲು ಶಿಫಾರಸ್ಸಿನೊಂದಿಗೆ ಮಾಹಿತಿ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಕೈಗಾರಿಕಾ ನಿರ್ದೇಶನಾಲಯವು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 36 ಕೈಸೇವಿ 2010, ಬೆಂಗಳೂರು, ದಿನಾಂಕ: 7ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರವರು ಸರ್ಕಾರಕ್ಕೆ ಉಂಟುಮಾಡಿರುವ ಆರ್ಥಿಕ ನಷ್ಟ ರೂ. 2,50,900/– (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರದ ಒಂಭೈನೂರು ಮಾತ್ರ) ಗಳನ್ನು ಹಾಗೂ ಅಧಿಕಾರಿಗಳಿಂದ ಬಾಕಿ ಇರುವ ಗೃಹ ಸಾಲ ಬಾಕಿ ರೂ. 12,674,00 (ಹನ್ನೆರಡು ಸಾವಿರದ ಆರು ನೂರ ಎಪ್ಪತ್ನಾಲ್ಕು ರೂಪಾಯಿಗಳು ಮಾತ್ರ)ನ್ನು ಬಡ್ಡಿ ಸಮೇತವಾಗಿ ಕಂಡಿಕೆ 4 ಹಾಗೂ 6ರ ರೀತ್ಯಾ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಆದೇಶಿಸಿದೆ. ಈ ಕುರಿತು ಕೈಗಾರಿಕಾಭಿವೃದ್ಧಿ ಆಯುಕ್ತರು ತೀವ್ರ ಕ್ರಮ ವಹಿಸುವಂತೆಯೂ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಬಿ. ಸಿ. **ಪ್ರಕಾಶ್**)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್. 1502

ENERGY SECRETARIAT

Sub :- Change of name of the Shivanasamudram Seasonal Power Project to Shivasamudram Run-of-the River Power Project.

Read :- 1) G.O. No. EN 74 PPC 2008, dated 30-01-2008
2) Letter dated 29-04-2010/03-05-2010 of Managing Director, Karnataka Power Corporation Limited.

***

Preamble:

1. Cabinet in its meeting held on 09-01-2009 accorded approval to take up the implementation of Shivanasamudram Seasonal Power Project by KPCL. Based on this Government Order read at (1) above was issued according approval for the following :

1) To inform Ministry of Power that as the entire head and submersion of Shivasamudram Seasonal Power Project lies well within the Karnataka territory, Karnataka State reserves its right for implementation of this project.
2) To withdraw the Shivasamudram Seasonal Power Project from National Hydro-electric Power Corporation and allot the same to Karnataka Power Corporation Limited.
3) To take up the implementation of the Shivasamudram Seasonal Power Project by Karnataka Power Corporation Limited.

2. Now Karnataka Power Corporation Limited (KPCL) in the letter read at (2) above, has stated that a revised DPR is under preparation by KPCL considering the discharges available up to the year 2008. After detailed studies, the following modifications/alterations are made while preparing the report :

a) The name of the project is modified as 'Shivasamudram Run-of-the River Power Project' so that it is clear from the title itself that there is no storage and consumptive use of water.
b) The Tail water level of Shivanasamudram Scheme is EL 405m. If the tail water level is kept at EL 405m and if Mekedatu Scheme on the downstream is implemented with the proposed FRL of EL 440m, then the proposed power house will come under submersion.

c) In order to safeguard the under ground power house from possible submersion if and when Mekedatu Scheme is implemented, the tailrace level for the underground power house kept at EL 440m., For the balance head available between EL 440m. to EL 405m., a surface power house is proposed.

d) In the revised proposal, instead of a single Under Ground Power House with an installed capacity of 270 MW (2 units of 135 MW) two power houses are proposed :

i. One Under Ground with an installed capacity of 300 MW (3 units of 100 MW each) and ;

ii. One surface Power House at the tailrace exit of the Underground Power House with an installed capacity of 45 MW (3 units of 15 MW each).

3. Further, KPCL has informed that when the Mekedatu Scheme is implemented, the main Under Ground Power House will be safe and only the second Power House (surface power house) gets submerged. The surface power house is proposed with steel structures which can be dismantled if Mekedatu Scheme is taken up.

4. In view of the above reasons, KPCL has requested Government to issue the Government Order for the allotment of Shivanasamudram Power Project to KPCL with the following modifications ;

- The name of the project to be modified as 'Shivasamudram Run of the River Power project ;
- The proposal is for two power house with total installed capacity of 345 MW

5. The proposal of KPCL has been examined and hence the following orders :

Government Order No. EN 74 PPC 2008, Bangalore, dated : 7th June, 2010

Under the circumstances explained in the preamle, Government is pleased to accord approval to effect the following changes in G.O. No. EN 74 PPC 2008, dated 30-01-2008.

1) To change the name of the project from Shivanasamudram Seasonal Power Project to **'Shivasamudram Run of the River Power Project :**

2) Instead of single Under Ground Power House with an installed capacity of 270 MW (2 units of 135 MW) to incorporate two power houses, one under ground with an installed capacity of 300 MW (3 Units of 100 MW each) and one surface Power House at the tailrace exit of the under power house with an installed capacity of 45 MW (3 units of 15 each)

The other terms and conditions mentioned in the Government Order read at (1) above remains unaltered.

By Order and in the name of the Governor of Karnataka

(**S. J. Sampath Kumar)**

Under Secretary to Government

Energy Department

P.R. 1504

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಅಪಜೀ 115 ಎಫ್ಎಪಿ 2009, ಬೆಂಗಳೂರು, ದಿನಾಂಕ 26ನೇ ಮೇ, 2010

ವಿಷಯ :– ವೃಕ್ಷಾರೋಪಣ ಅಭಿಯಾನ ಕಾರ್ಯಕ್ರಮವನ್ನು ಜಾರಿಗೊಳಿಸುವ ಕುರಿತು

ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಬರುವ ಜೂನ್/ಜುಲೈ ತಿಂಗಳುಗಳ ಅವಧಿಯಲ್ಲಿ ಕರ್ನಾಟಕ ರಾಜ್ಯಾದ್ಯಂತ "ವೃಕ್ಷಾರೋಪಣ ಅಭಿಯಾನ" ಹಮ್ಮಿಕೊಳ್ಳಲಾಗುವುದು, ರಾಜ್ಯದ ಪ್ರತಿ ತಾಲ್ಲೂಕಿನ ಹಾಗೂ ಹೋಬಳಿ ಮಟ್ಟದಲ್ಲಿ ಗಿಡ ನೆಡುವುದು ಮತ್ತು ಪರಿಸರ ಸಂರಕ್ಷಣೆ ಕುರಿತಂತೆ ವ್ಯಾಪಕ ಜನಜಾಗೃತಿ ಉಂಟು ಮಾಡುವ ಉದ್ದೇಶದ ಕಾರ್ಯಕ್ರಮ ಇದಾಗಲಿದೆ. ಈ ವರ್ಷದ ವೃಕ್ಷಾರೋಪಣ ಕಾರ್ಯಕ್ರಮದಲ್ಲಿ ಸಾಲು ಮರಗಳನ್ನು ಬೆಳೆಸಲು ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಲಾಗಿದೆ.

ರಾಜ್ಯ ಅರಣ್ಯ ಮತ್ತು ಪರಿಸರ ಇಲಾಖೆ ಆಶ್ರಯದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ರಾಜ್ಯ ಪಶ್ಚಿಮಘಟ್ಟ ಕಾರ್ಯಪಡೆಯ ಮಾರ್ಗದರ್ಶನ ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿಗಳ ನೇತೃತ್ವ ಹಾಗೂ ಅರಣ್ಯ ಅಧಿಕಾರಿಗಳ ಸಂಯೋಜಕತ್ವ ಇರುವ ಜಿಲ್ಲಾ ಸಮಿತಿ ಆಯಾ ಜಿಲ್ಲೆಗಳ ಕಾರ್ಯಕ್ರಮಗಳನ್ನು ನಿರ್ಧರಿಸುತ್ತದೆ. ಈ ಕುರಿತಂತೆ ಪ್ರತಿ ಜಿಲ್ಲೆಯಲ್ಲಿ ಈ ಕೆಳಕಂಡಂತೆ ಕೈಗೊಳ್ಳುವುದು.

1. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಭೆ ಏರ್ಪಡಿಸಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಒಂದು ಚಾಲನಾ ಸಮಿತಿ (ಸ್ಟೀರಿಂಗ್ ಕಮಿಟಿ) ರಚಿಸಬೇಕು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಇತ್ಯಾದಿ ಎಲ್ಲಾ ಜಿಲ್ಲೆಗಳ ಇಲಾಖಾ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡು ಚಾಲನಾ ಸಮಿತಿಯ ಸದಸ್ಯರಾಗಬೇಕು.
2. ಸಭೆಗೆ ಪಶ್ಚಿಮಘಟ್ಟ ಕಾರ್ಯಪಡೆಯ ಈ ಭಾಗದ ಸದಸ್ಯರನ್ನು ಸಹ ಆಹ್ವಾನಿಸಬೇಕು
3. ಸಭೆಯಲ್ಲಿ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಗಳು/ವ್ಯಕ್ತಿಗಳು (ಈ ಕ್ಷೇತ್ರದಲ್ಲಿ ಅನುಭವ/ಪ್ರಾಮುಖ್ಯತೆ ಉಳ್ಳವರು) ಸಕ್ರಿಯ ಪಾತ್ರವಹಿಸಲು ಅಗತ್ಯ ಕ್ರಮವಹಿಸಬೇಕು.
4. ಜಿಲ್ಲಾ ಚಾಲನಾ ಸಮಿತಿಯ ಜಿಲ್ಲಾ ಮಟ್ಟದ ಸ್ಥೂಲ ಕಾರ್ಯಕ್ರಮ ಒಂದನ್ನು ರೂಪಿಸಲು ನಿರ್ಧರಿಸಿ ಅರಣ್ಯ ಇಲಾಖೆ ಪೂರೈಸಬಹುದಾದ ಗಿಡಗಳ ಲಭ್ಯತೆ ಆಧರಿಸಿ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಈ ಕಾರ್ಯಕ್ರಮ ನಡೆಸಲು ಆದೇಶಿಸಿ ಮತ್ತು ಮಾರ್ಗದರ್ಶನ ನೀಡಬೇಕು.
5. ಶಾಲಾ ಕಾಲೇಜುಗಳನ್ನು ಸಂಪರ್ಕಿಸಿ ಅವರನ್ನು ಪಾಲ್ಗೊಳ್ಳುವಂತೆ/ಪ್ರೇರೇಪಿಸುವಂತೆ ತಾಲ್ಲೂಕು ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವುದನ್ನು ಸೇರಿ ಒಟ್ಟು ಕಾರ್ಯಕ್ರಮದ ನೇತೃತ್ವವನ್ನು ತಾಲ್ಲೂಕಿನ ತಹಶೀಲ್ದಾರ್ ವಹಿಸಬೇಕು.
6. ನಗರಸಭಾ ಪ್ರದೇಶದಲ್ಲಿ ಈ ಕಾರ್ಯಕ್ರಮದ ನೇತೃತ್ವವನ್ನು ನಗರ ಸಭೆಯ ಮುಖ್ಯಾಧಿಕಾರಿ ವಹಿಸಿಕೊಳ್ಳಬೇಕು.
7. ಹೋಬಳಿ/ಗ್ರಾಮ/ಹಳ್ಳಿ ಮಟ್ಟದಲ್ಲಿ ಅರಣ್ಯ ಇಲಾಖೆ ಗ್ರಾಮ ಪಂಚಾಯಿತಿ ನೇರವಾಗಿ ಸ್ಥಳೀಯ ಸಂಘ ಸಂಸ್ಥೆ, ಶಾಲಾ-ಕಾಲೇಜುಗಳು, ಪಂಚಾಯತ್ ಜೀವ ವೈವಿಧ್ಯ ಸಮಿತಿ ಹಾಗೂ ಸ್ಥಳೀಯ ಗಣ್ಯರ ಸಹಯೋಗದೊಂದಿಗೆ ಕಾರ್ಯಕ್ರಮ ನಡೆಸಬೇಕು.
8. ವೃಕ್ಷಾರೋಪಣ ಅಭಿಯಾನ ಸಪ್ತಾಹದ ಮೊದಲ ದಿನ ಜಿಲ್ಲೆಯ ಒಂದು ಸ್ಥಳದಲ್ಲಿ ಜಿಲ್ಲಾ ಮಂತ್ರಿಗಳಿಂದ ಕಾರ್ಯಕ್ರಮ ಚಾಲನೆಗೊಂಡು, ಉಳಿದ ಒಂದು ವಾರದ ಅವಧಿಯಲ್ಲಿ ತಾಲ್ಲೂಕುಗಳಲ್ಲಿ ಹಾಗೂ ಹೋಬಳಿಗಳಲ್ಲಿ ಸಂಘಟಿತವಾಗಬೇಕು, ತಿಂಗಳವರೆಗೆ ಕಾರ್ಯಕ್ರಮ ನಡೆಸಬಹುದು.
9. ವೃಕ್ಷಾರೋಪಣ ಕಾರ್ಯಕ್ರಮವು ಒಟ್ಟಾರೆಯಾಗಿ ಸ್ಥಳೀಯ ಜನತೆಯ ಪಾಲ್ಗೊಳ್ಳುವಿಕೆಯೊಂದಿಗೆ ಒಂದು ಮಹತ್ವದ ಅಭಿಯಾನವಾಗಿ/ಆಂದೋಲನವಾಗಿ ರೂಪುಗೊಳ್ಳಬೇಕು.
10. ಒಟ್ಟಿನಲ್ಲಿ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಇದೊಂದು ಪರಿಸರ ಜಾಗೃತಿ ಉತ್ಸವವಾಗುವಂತೆ ಸಂಬಂಧಪಟ್ಟ ಎಲ್ಲರೂ ಕಾರ್ಯನಿರ್ವಹಿಸಬೇಕು. ಕಾರ್ಯಕ್ರಮವನ್ನು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಸಲು ಕ್ರಿಯಾ ಶೀಲವಾದ ಇತರೆ ಕ್ರಮಗಳನ್ನು ಜಿಲ್ಲೆಯ ಅಧಿಕಾರಿಗಳು ಕೈಗೊಂಡು ಈ ಹಸಿರು ಆಂದೋಲನ ಜನಪ್ರಿಯವಾಗುವಂತೆ ಶಕ್ತಿಮೀರಿ ಶ್ರಮಿಸಬೇಕು.

ವೃಕ್ಷಾರೋಪಣ ಸಪ್ತಾಹ ಕಾರ್ಯಕ್ರಮದ ಸ್ವರೂಪದ ಪ್ರತಿ ಲಗತ್ತಿಸಿದೆ.

(ಎಸ್. ವಿ. ರಂಗನಾಥ್)

ಸರ್ಕಾರದ ಮುಖ್ಯ ಕಾರ್ಯದರ್ಶಿ

ವೃಕ್ಷಾರೋಪಣಾ ಕಾರ್ಯಕ್ರಮದ ಸ್ವರೂಪ

ಇಡೀ ವೃಕ್ಷಾರೋಪಣ ಕಾರ್ಯಕ್ರಮದ ಮೂಲ ಉದ್ದೇಶವೆಂದರೆ, ಜನರ ಸಹಭಾಗಿತ್ವದೊಂದಿಗೆ ಹಸಿರೀಕರಣ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಕಾರ್ಯಕ್ರಮಗಳ ಸ್ವರೂಪ ಈ ಕೆಳಗಿನಂತಿರಬಹುದಾಗಿದ್ದು, ಇವು ಕೇವಲ ಸಲಹಾ ಸ್ವರೂಪ ಹೊಂದಿದ್ದು, ಸೂಕ್ತ ಮಾರ್ಪಾಟುಗಳನ್ನು ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಮಾಡಿಕೊಳ್ಳಬಹುದು.

1. ರಾಜ್ಯಾದ್ಯಂತ ಪ್ರತಿ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ, ಪಂಚಾಯತ್/ಹೋಬಳಿ ಕೇಂದ್ರಗಳೂ ಸೇರಿದಂತೆ ಸಾಧ್ಯವಾದ ಎಲ್ಲಾ ಸ್ಥಳಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವುದು.
2. ಈ ಕಾರ್ಯಕ್ರಮವು ಅರಣ್ಯ ಇಲಾಖೆಯ ಸಂಯೋಜನೆಯಲ್ಲಿ ಇತರೆ ಇಲಾಖೆಗಳ ಸಹಯೋಗದೊಂದಿಗೆ ಸಂಘಟಿತವಾಗುತ್ತದೆ.
3. ಸರ್ಕಾರಿ ಇಲಾಖೆಗಳ ಜೊತೆಗೆ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು, ಶಾಲಾ-ಕಾಲೇಜು ಅಧ್ಯಾಪಕರು, ವಿದ್ಯಾರ್ಥಿಗಳು, ಸೇವಾ ಸಂಸ್ಥೆಗಳು, ಎನ್.ಎಸ್.ಎಸ್. ಮತ್ತು ಎನ್.ಸಿ.ಸಿ. ಘಟಕಗಳು, ಜಿಲ್ಲಾ ವಿಜ್ಞಾನ ಕೇಂದ್ರ, ಶಾಲಾ-ಹೈಸ್ಕೂಲ್‌ಗಳು, ಸ್ವಸಹಾಯ ಗುಂಪುಗಳು, ಅರಣ್ಯ ಸಮಿತಿಗಳು ಮತ್ತು ದೇವಸ್ಥಾನ ಆಡಳಿತ ಮಂಡಳಿಗಳು ಇತ್ಯಾದಿ ಈ ಕಾರ್ಯಕ್ರಮದಲ್ಲಿ ನೇರವಾಗಿ ಪಾಲ್ಗೊಳ್ಳುವಂತೆ ಕಾರ್ಯಕ್ರಮ ರೂಪಿಸುವುದು.
4. ಇಂಥ ಜನ ಪ್ರತಿನಿಧಿ ಕಾರ್ಯಕ್ರಮಗಳನ್ನು ಸ್ಥಳೀಯ ಜನಪ್ರತಿನಿಧಿಗಳು/ಗಣ್ಯರಿಂದ ಉದ್ಘಾಟನೆ ಮೂಲಕ ಚಾಲನೆಗೊಳ್ಳುವುದು, ಅರಣ್ಯ ಇಲಾಖೆ ಪೂರೈಸುವ ಲಭ್ಯವಿರುವ ಗಿಡಗಳನ್ನು ನಿಗದಿತ ಪ್ರದೇಶದಲ್ಲಿ ಪಾಲ್ಗೊಂಡ

ಜನರ ಮೂಲಕ ನೆಡಸುವುದು (ರಸ್ತೆ ಬದಿ/ಶಾಲಾವನ/ಕೆರೆ–ಕೊಳ್ಳ, ಬದಿ/ಆಸ್ಪತ್ರೆ–ಇಲಾಖೆ ಆವರಣ/ದೇವರಕಾಡು ಪ್ರದೇಶ/ಅರಣ್ಯ ಸಮಿತಿಗೆ ಒಳಪಟ್ಟ ಪ್ರದೇಶ/ನಗರದ ರುದ್ರಭೂಮಿ ಇತ್ಯಾದಿ).

5. ಇಂಥ ಪ್ರತಿ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ–ಮಣ್ಣು ಸಂರಕ್ಷಣೆ–ಜಲಾನಯನ ಅಭಿವೃದ್ಧಿ–ಇತ್ಯಾದಿ ವಿಷಯಗಳ ಕುರಿತಂತೆ ಸ್ಥಳೀಯ ತಜ್ಞರಿಂದ ಉಪನ್ಯಾಸ ಏರ್ಪಡಿಸುವುದು.
6. ಕಾರ್ಯಕ್ರಮಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಂದ ಲಘು ಮನರಂಜನೆ, ಪ್ರತಿಭಾನ್ವಿತ ವಿದ್ಯಾರ್ಥಿ/ಯುವಕರಿಗೆ ವೃಕ್ಷ ಉಡುಗೊರೆ, ಕಾರ್ಯಕ್ರಮ ಪೂರ್ವದಲ್ಲಿ ವೃಕ್ಷಗಳೊಂದಿಗೆ ಶೋಭಾಯಾತ್ರೆ, ಔಷಧಿ ಸಸ್ಯಗಳ ಕಿರು ಪ್ರದರ್ಶನ, ಅಪರೂಪದ ಗಿಡಗಳ ಛಾಯಾಚಿತ್ರ ಪ್ರದರ್ಶನ ಇತ್ತಾದಿ ಕಾರ್ಯಕ್ರಗಳನ್ನು ಹಮ್ಮಿಕೊಳ್ಳುವುದು.
7. ಕಾರ್ಯಕ್ರಮಕ್ಕೆ ಪೂರಕವಾಗಿ ಸ್ಥಳೀಯವಾಗಿ ಪರಿಚಿತವಿರುವ ಪರಿಸರ ಸಂರಕ್ಷಣೆ ಕರಿತಂತೆ ಗಮನಾರ್ಹ ಕೆಲಸ ಮಾಡಿರುವ ವ್ಯಕ್ತಿ/ಸಂಸ್ಥೆಗಳನ್ನು ಗೌರವಿಸಿ ಅವರಿಗೆ ಪ್ರೋತ್ಸಾಹ ನೀಡುವುದು.
8. ಈ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡ ಕಾರ್ಯಕ್ರಮವನ್ನು ನಿಗಧಿತ ದಿನದಂದು ಸಪ್ತಾಹದ ಅವಧಿಯಲ್ಲಿ ನಿಶ್ಚಯಿಸಿ, ಸಾಕಷ್ಟು ಮೊದಲೇ ಸ್ಥಳೀಯ ಪತ್ರಿಕೆಗಳಲ್ಲಿ ಸುದ್ದಿಯನ್ನು ಪ್ರಕಟಿಸುವುದರ ಮೂಲಕ ಸಂಪೂರ್ಣ ಜನಾಂದೋಲನವನ್ನಾಗಿ ರೂಪಿಸುವುದು.

ಪಿ.ಆರ್. 1505

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜೆ. ಟಿ. ಹದ್ದನ್ನವರ, ಸಿ.ಪಿ.ಸಿ.–1952 ಮತ್ತು ವೈ. ವಿ. ಸಪ್ತಸಾಗರ, ಸಿ.ಪಿ.ಸಿ.–1779, ಸದಲಗಾ ಪೊಲೀಸ್ ಠಾಣೆ, ಬೆಳಗಾವಿ, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಅಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ 2/ಇವಿ/32/2007 (ಅ.ಪು :415/2008) ದಿನಾಂಕ 21–4–08.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ ಇವರ ಆದೇಶ ಸಂಖ್ಯೆ : ಅಪೀಲು/29/ಉವ/2008, ದಿನಾಂಕ 26–8–2008.
3) ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 23–10–2008
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 94/2008–09, ದಿನಾಂಕ 22–7–2009.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 225 ಸಿಎನ್‌ಎಸ್ 09, ದಿನಾಂಕ 06–5–2010.

ಪ್ರಸ್ತಾವನೆ :

ಶ್ರೀ ಜೆ. ಟಿ. ಹದ್ದನ್ನವರ, ಸಿ.ಪಿ.ಸಿ.–1952, ಘಟಪ್ರಭಾ ಪೊಲೀಸ್ ಠಾಣೆ ಮತ್ತು ವೈ. ವಿ. ಸಪ್ತಸಾಗರ, ಸಿ.ಪಿ.ಸಿ.–1779, ಮೂಡಲಗಿ ಪೊಲೀಸ್ ಠಾಣೆ, ಇವರುಗಳು ಈ ಹಿಂದೆ ಸದಲಗಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ವಿಮುಖತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಆಪಾದಿತ ಪೊಲೀಸ್ ಅಧಿಕಾರಿಯಾದ ನೀವು ಸಿ.ಪಿ.ಸಿ. ಬ.ನಂ. 1952, ಜೆ.ಟಿ. ಹದ್ದನ್ನವರ ಹಾಗೂ ಸಿ.ಪಿ.ಸಿ. ಬ.ನಂ. 1799, ವೈ.ಬಿ. ಸಪ್ತಸಾಗರ, ನೀವಿಬ್ಬರೂ ಸದಲಗಾ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ನೀವುಗಳು ಸದಲಗಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಬೇಡಿಕಿಹಾಳ ಗ್ರಾಮದಲ್ಲಿ ವಾಸವಾದ ಓ.ಸಿ. ಬುಕ್ಕಿಯಾದ ನೇಮಗೊಂಡಾ ಶಿವಗೊಂಡ ಭೋಜೆ ಪಾಟೀಲ್, ಇವರೊಂದಿಗೆ ಶಾಮೀಲಾಗಿ ಓ.ಸಿ. ಮಟಕಾ ನಡೆಸಲು ಸಹಕರಿಸಿದ್ದಲ್ಲದೇ, ಮೇಲಾಧಿಕಾರಿಗಳು ದಾಳಿ ಕೈಗೊಳ್ಳುವುದರ ಬಗ್ಗೆ ಮತ್ತು ಇತರೇ ಮಾಹಿತಿಗಳನ್ನು ಸದರಿ ಓ.ಸಿ. ಬುಕ್ಕಿಗಳಿಗೆ ನೀಡುತ್ತಾ ಬಂದು ಅವನ ಕಡೆಯಿಂದಾ ಕಳೆದ 2–3 ವರ್ಷಗಳಿಂದಾ ಪ್ರತಿ ತಿಂಗಳು

ತಲಾ 500–00 ರೂಪಾಯಿಗಳಂತೆ ಮಾಹೆ ನವೆಂಬರ್–2006 ರಿಂದಾ ಪ್ರತಿ ತಿಂಗಳು ತಲಾ 5000–00 ರೂಪಾಯಿಯಂತೆ ಹಣವನ್ನು ಪಡೆದು ಕಾನೂನ ಬಾಹೀರ ಚಟುವಟಿಕೆಯಾದ ಓ.ಸಿ. ಮಟಕಾ ಜೂಜಾಟ ನಡೆಸಲು ಸದರಿ ಬುಕ್ಕಿಗೆ ಅನುವು ಮಾಡಿಕೊಟ್ಟು ನಿಮ್ಮ ಕರ್ತವ್ಯದಲ್ಲಿ ಘೋರ ವಿಮುಖತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರುಗಳ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 21–04–2008ರ ಆದೇಶದಲ್ಲಿ ಅರ್ಜಿದಾರರುಗಳ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ ಪರಿಣಾಮ ಬೀರುವಂತೆ ಇಳಿಸುವ ದಂಡನೆಯನ್ನು ವಿಧಿಸಿದ್ದಾರೆ. ಇವರುಗಳು ಹೊಸದಾಗಿ ವೇತನ ಬಡ್ತಿಗಳನ್ನು ಗಳಿಸುವುದು ದಿನಾಂಕ 31–07–2007 ರಿಂದ 17–11–2007ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರನ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ 26–08–2008ರ ಅದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರುಗಳು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರುಗಳ ವಿರುದ್ಧ ಆರೋಪವು ಸಾಬೀತಾಗಿದೆ ಅದರೆ ಶಿಸ್ತು ಪ್ರಾಧಿಕಾರದ ದಂಡನಾದೇಶವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 59(1)(ಬಿ) ವ್ಯತಿರಿಕ್ತವಾಗಿರುವುದರಿಂದ ಶಿಸ್ತು ಪಾಧಿಕಾರದ ದಂಡನಾದೇಶವನ್ನು ಮಾರ್ಪಾಡಿಸುವ ಕುರಿತಂತೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 360 ಪೊಸಿಅ 2008, ಬೆಂಗಳೂರು, ದಿನಾಂಕ: 3ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜೆ. ಟಿ. ಹದ್ದನ್ನವರ, ಸಿ.ಪಿ.ಸಿ.–1952 ಮತ್ತು ವೈ. ವಿ. ಸಪ್ತಸಾಗರ, ಸಿ.ಪಿ.ಸಿ.–1779, ಸದಲಗಾ ಪೊಲೀಸ್ ಠಾಣೆ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ 21–04–08ರ ಆದೇಶದಲ್ಲಿ ವಿಧಿಸಿದ ದಂಡನಾದೇಶವನ್ನು ಈ ಕೆಳಕಂಡಂತೆ ಮಾರ್ಪಾಡಿಸಿ ಆದೇಶಿಸಿದೆ.

i) ಶ್ರೀ ಜಿ. ಟಿ. ಹದ್ದನ್ನವರ, ಸಿಪಿಸಿ ಮತ್ತು ವೈ. ವಿ. ಸಪ್ತಸಾಗರ, ಸಿಪಿಸಿ, ಇವರುಗಳ ವೇತನವನ್ನು ಪಿ.ಸಿ. ಹುದ್ದೆಯ ಕನಿಷ್ಠ ವೇತನಕ್ಕೆ ಮೂರು ವರ್ಷಗಳ ಕಾಲ ಸಂಚಿತ ಪರಿಣಾಮ ಸಹಿತವಾಗಿ (With Cummulative effect) ಇಳಿಸುವುದು ದಂಡನೆಯ ಅವಧಿಯಲ್ಲಿ ಇವರುಗಳು ಯಾವುದೇ ವಾರ್ಷಿಕ ವೇತನ ಬಡ್ತಿಯಾಗಲಿ ಅಥವಾ ಪದೋನ್ನತಿಯಾಗಲಿ ಪಡೆಯಲು ಅರ್ಹರಿರುವುದಿಲ್ಲ, ಇವರ ವೇತನವು ಸ್ಥಿರವಾಗಿರುತ್ತದೆ.

ii) ಇವರ ದಂಡನೆಯು ದಿನಾಂಕ 01–05–2008 ರಿಂದ 30–04–2011ರ ವರೆಗೆ ಮೂರು ವರ್ಷಗಳು ಇರುತ್ತದೆ.

iii) ದಂಡನಾವಧಿಯಾದ ಮೂರು ವರ್ಷಗಳು ಪೂರ್ಣಗೊಂಡ ನಂತರ ಇವರ ವೇತನವನ್ನು ಇವರು ದಂಡನಾವಧಿಯ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನದಿಂದ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವುದು.

iv) ಇವರುಗಳ ಅಮಾನತ್ತಿನ ಅವಧಿ ದಿನಾಂಕ 31–07–07 ರಿಂದ 17–11–2007ರ ವರೆಗಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಅಲಿಸ್ ಗೊನ್ಸಾಲ್ವಿಸ್)

ಸರ್ಕಾರದ ಅಧೀನ ಕಾರ್ಯದರ್ಶಿ (ಹೆ.ಪ್ರ)

ಪಿ.ಆರ್. 1506 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub :- Proposal of IIITB Bangalore for financial support for expansion of current campus in Bangalore.

Read :- 1. Govt. Order No. ITD 30 MDA 2009, dated 18-01-2010

2. Letter dated 25-05-2010 of the Director, IIITB, Bangalore.

Preamble:

International Institute of Information Technology, Bangalore during 2009-10, has submitted a proposal for expansion of their current campus at Electronics City, Bangalore at an estimated cost of Rs. 11.43 crores vide their letter dated 1-10-2009, Whereas, Finance Department vide their Note No. FD 304 Exp-2/09, dated 21-12-2009 agreed to provide Rs. 6.50 crores for the said project and to provide Rs. 300 lakhs for 2009-10 in Supplementary Estimate-II under the Head of Account **"3451-00-090-2-05-101 [Plan]"**

Accordingly, in the Government Order read at [1] above, Government had accorded approval for release of Rs. 300 lakhs to the Director, International Institute of Information technology, Bangalore [IIITB] for expansion of their current campus at Electronics City in Bangalore.

The Director, IIITB, Bangalore vide their letter dated 25-5-2010 read at [2] above, has requested to release the balance amount of Rs. 300 lakhs which has been provided in the 2010-11 Budget.

The request of the Director, IIITB has been examined and decided to release Rs. 100 lakhs to the Director, IIITB for expansion of their current campus at Electronics City, Bangalore out of Rs. 300 lakhs provided under the Head of Account **"3451-00-090-2-05-101 [Plan]"** as per the delegated powers to Principal Secretary, Hence the Order.

Government Order No. ITD 30 MDA 2009, Bangalore, dated : 22-06-2010

In the circumstance explained in the preamble, Government are pleased to accord approval for release of Rs. 100 lakhs [Rupees One hundred lakhs only] to the Director, International Institute of Information Technology, Bangalore [IIITB] for expansion of their current campus at Electronics City in Bangalore out of Rs.300 lakhs provided in the 2010-11 Budget.

The expenditure on this account shall be met, out of the grants provided under the head of account **"3451-00-090-2-05-101 [Plan]"** for the year 2010-11.

The Administrative Officer, Directorate of Information Technology & Bio Technology Department shall draw the said grant from the Treasury duly countersigned by the Director, Information Technology & Biotechnology and disburse the amount.

The Director, International Institute of Information Technology, Bangalore [IIITB] shall submit the Utilization Certificate in the prescribed format through the Director, Information Technology and Biotechnology, Bangalore.

This order issue as per the delegated powers to Principal Secretary vide Government Order No. FD 1 TFP 2008, dated 16-5-2008.,

By Order and in the name of the Governor of Karnataka
(**J. R. Annapurna)**
Under Secretary to Government [I/C]
Information Technology, Biotechnology and
Science and Technology Department

P.R. 1624

COMMERCE & INDUSTRIES SECRETARIAT

Sub :- Approval to the Project Proposal of M/s. Silver GEM Energy Diodes Ltd., to establish a unit for manufacture of "LED" at Devanahalli Industrial Area, Devanahalli Taluk, Bangalore Rural District or Harohalli Industrial Area, Ramanagara District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s. Silver GEM Energy Diodes Ltd., proposes to establish a unit for manufacture of "LED" at Devanahalli Industrial Area, Devanahalli Taluk, Bangalore Rural District or Harohalli Industrial Area, Ramanagara District, with an investment of Rs. 250 crores, generating employment to about 1500 persons.

In the 22nd State High Level Clearance Committee (SHLCC) meeting held on 24-05-2010 the Proposal of the Company has been approved.

Government has examined the recommendations made by the State High Level Clearance Committee in the 22nd meeting held on 24-05-2010 in all aspects.

Hence the following Order.

Government Order No. CI 248 SPI 2010, Bangalore, dated 02-06-2010

Government is pleased to accord in principle approval to the project proposal of M/s. Silver GEM Energy Diodes Ltd., to establish a unit for manufacture of "LED" at Devanahalli Industrial Area, Devanahalli Taluk, Bangalore Rural District or Harohalli Industrial Area, Ramanagara District, with an investment of Rs. 250 crores, generating employment to about 1500 persons and extend the following infrastructure facilities, incentives and concessions.

Infrastructure Facilities :

1. **Land :** 5 acres at Devanahalli Industrial Area, Devanahalli Taluk, Bangalore Rural District or Harohalli Industrial Area, Ramanagara District.
2. **Water :** Required water to be supplied by KIADB
3. **Power :** Required power to be supplied by BESCOM
4. **Incentives and Concessions :** As per applicable Semiconductor Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   - d) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   - e) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate)**

P.R. 1625

Desk Officer (Technical Cell)

Commerce & Industries Department

INFRASTRUCTURE DEVELOPMENT SECRETARIAT

Sub :- Release of funds towards cost sharing Railway project Kotturu-Harihar new broad gauge railway line project.

Read :-
1. G.O. No. IDD 1 NSW 2002, dated 22-03-2002
2. G.O. No. IDD 47 NSW 2003, (P) dated 26-03-2004
3. G.O. No. IDD 51 NSW 2004, dated 19-07-2004
4. G.O. No. IDD 98 NSW 2003, dated 21-10-2006
5. G.O. No. IDD 98 NSW 2003, dated 20-12-2006
6. G.O. No. IDD 98 NSW 2003, dated 05-09-2007
7. G.O. No. IDD 15 NSW 2008, dated 22-10-2008
8. G.O. No. IDD 15 NSW 2008, dated 17-12-2008
9. G.O. No. IDD 15 NSW 2008, dated 20-01-2009
10. G.O. No. IDD 15 NSW 2008, dated 04-08-2009
11. G.O. No. IDD 15 NSW 2008, dated 20-03-2010
12. Letter No. W. 63/CN/BNC/MNC/MR/B/GL dated 24-04-2010 of Chief Engineer, (Con) SWR, Bangalore.

Preamble:

In the Government Orders referred to at Sl. No. (1) to (11) above Government of Karnataka has so far released an amount of Rs. 200.66 crore towards cost sharing for Kotturu-Harihar New railway line project.

The Chief Engineer, South Western Railway, Bangalore in his letter read at Sl. No. (12) above, has stated there is cost escalation and that the earlier cost of Rs. 302.23 crore is likely to increase to Rs. 326.00 crores and the share of Government of Karnataka will be Rs. 217.33 crores. Money deposited by Government of Karnataka so far is Rs. 200.66 crores. Hence, he has requested to deposit the amount that is balance 2/3 share of Government of Karnataka. i.e., Rs. 16.67 crores immediately towards Kotturu-Harihar new railway line project i.e.

The proposal of Railways has been examined and it has been decided to release an amount of Rs. 4.51 crore out of the Budget of Rs. 272.50 crore provided under the Head of Account “5465-01-190-3-05” (Plan) 211 investment towards cost sharing for new railway projects during 2010-11.

Hence the following Order.

Government Order No. IDD 15 NSW 2008, Bangalore, dated 21-06-2010

After careful examination of the request of Railways, Government is pleased to release an amount of Rs. 4.51 crore (Rupees Four Crore fifty one lakhs only) towards Kotturu-Harihar new railway line being the part of the balance 2/3rd share of Government of Karnataka and the above amount shall be met under the Head of Account **“5465-01-190-05” (Plan) 211 investment** out of the budget provision Rs. 272.50 crore, towards cost sharing for new railway projects during 2010-11.

The Chief Executive Officer, K-RIDE is authorized to draw the amount on a payee’s receipt duly countersigned by the Under Secretary to Government infrastructure development department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

This order is issued in accordance with the concurrence of Finance Department given vide U.O. Note. No. FD 1000 Exp-1/2010, dated 11-06-2010.

By Order and in the name of the Governor of Karnataka

(**N. Manjula Geetha)**

Under Secretary to Government,

P.R. 1626

Infrastructure Development Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಸ್. ಜಿ. ಬಿರಾದಾರ್, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ–ಆರೋಪ ಮುಕ್ತರನ್ನಾಗಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1) ನೋಟೀಸ್ ಸಂ. ಸಿಆಸುಸಇ 171 ಎಸ್ಇಎನ್ 06, ದಿನಾಂಕ 23–12–2006

2) ಶ್ರೀ ಎಸ್. ಜಿ. ಬಿರಾದರ್, ಕೆ.ಎ.ಎಸ್. (ನಿ) ಅಧಿಕಾರಿ ರವರ ಲಿಖಿತ ಹೇಳಿಕೆ ದಿನಾಂಕ 27–05–09.

ಪ್ರಸ್ತಾವನೆ :

ಶ್ರೀ ಎಸ್. ಜಿ. ಬಿರಾದಾರ್, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ರವರು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿ ಮಹಾನಗರ ಪಾಲಿಕೆಯ 6 ತುಂಡು ಕಾಮಗಾರಿಗಳಿಗೆ ಸಂಬಂಧಿಸಿದ ರೂ. 8,65,434.00 ಗಳ ಬಿಲ್ಲುಗಳನ್ನು ಶ್ರಿ ಪಿ. ವಿ. ಪೋತೇದಾರ್ ಎಂಬುವವರಿಗೆ ಪಾವತಿಸಿರುವ ಪ್ರಕರಣದಲ್ಲಿ ತಪ್ಪಿತಸ್ಥ ಪಾಲಿಕೆ ಅಧಿಕಾರಿಗಳ ಮೇಲೆ ವಿಚಾರಣೆ ನಡೆಸಲು ಸರ್ಕಾರ ಆದೇಶ ಸಂ.ನಅಇ 171 ಎಎಚ್ಡಿ 2002 ದಿನಾಂಕ 22–04–03 ರಂದು ಆದೇಶವಾಗಿದ್ದು, ಈ ಆದೇಶದನ್ವಯ ಆಪಾದಿತ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿರುವುದರಿಂದ ಇವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳ ನಿಯಮ 214 ರಡಿ ಇಲಾಖಾ ವಿಚಾರಣೆ ನಡೆಸಲು ನಿರ್ಣಯಿಸಿ ಮೇಲೆ ಕ್ರಮ ಸಂ (1) ರಲ್ಲಿ ಓದಲಾದ ನೋಟೀಸಿನೊಂದಿಗೆ ದೋಷಾರೋಪಣೆಗಳನ್ನು ಜಾರಿ ಮಾಡುವುದರ ಮೂಲಕ ಇವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಯಿತು. ಮೇಲೆ ಓದಲಾದ ಕ್ರಮ ಸಂ (2) ರಲ್ಲಿ ಅಪಾದಿತ ಅಧಿಕಾರಿಗಳು ನೋಟೀಸ್‌ಗೆ ಉತ್ತರ ಸಲ್ಲಿಸಿ ಅವರ ಮೇಲೆ ಹೊರಿಸಲಾದ ಆರೋಪಗಳನ್ನು ನಿರಾಕರಿಸಿರುತ್ತಾರೆ.

ಶ್ರೀ ಎಸ್. ಜಿ. ಬಿರಾದಾರ್, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಇವರು ತಮ್ಮ ಉತ್ತರದಲ್ಲಿ ತಾವು ದಿನಾಂಕ 03–03–2003 ರಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ಆಯುಕ್ತರಾಗಿ ಕರ್ತವ್ಯಕ್ಕೆ ಹಾಜರಾಗಿ ದಿನಾಂಕ 31–05–04 ರವರೆಗೆ ಕರ್ತವ್ಯ ನಿರ್ವಹಿಸಿರುವುದಾಗಿ ತಿಳಿಸುತ್ತಾ, ಈ ಅವಧಿಯಲ್ಲಿ ಪ್ರಸ್ತಾವಿತ ಅಪಾದಿತರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಪ್ರಸ್ತಾವನೆ/ಆದೇಶ ತಮ್ಮ ಗಮನಕ್ಕೆ ಬಂದಿರುವುದಿಲ್ಲವೆಂದು, ಈ ಕರ್ತವ್ಯ ಲೋಪಕ್ಕೆ ತಾವು ಜವಾಬ್ದಾರರಲ್ಲವೆಂದು, ತಿಳಿಸುತ್ತಾ ತಮ್ಮ ವಿರುದ್ಧದ ಆರೋಪಗಳನ್ನು ಕೈಬಿಡುವಂತೆ ಕೋರಿದ್ದರು. ಅದರಂತೆ ಶ್ರೀ ಎಸ್. ಜಿ. ಬಿರಾದಾರ್ ರವರು ಸಲ್ಲಿಸಿದ್ದ ಸಮಜಾಯಿಷಿಯನ್ನು ಆಡಳಿತ ಇಲಾಖೆಯಾದ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿ ಅಪಾದಿತರು ನೀಡಿದ್ದ ಸಮಜಾಯಿಷಯಲ್ಲಿನ ನೈಜತೆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಕೋರಲಾಗಿತ್ತು. ಅದರಂತೆ ನಗರಾಭಿವೃದ್ಧಿ ಇಲಾಖೆಯು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತರಿಂದ ವಿವರವಾದ ವರದಿ ಪಡೆದಿದ್ದು, ಸದರಿ ವರದಿಯಂತೆ ತುಂಡು ಗುತ್ತಿಗೆ ಕಾಮಗಾರಿ ಪ್ರಕರಣದಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಶ್ರೀ ಎಸ್. ಜಿ. ಬಿರಾದಾರ್ ಇವರು ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಅವರಿಗೆ ಒಮ್ಮೆಯೂ ಸಹ ಮಂಡಿಸಿರುವುದಿಲ್ಲವೆಂದು ತಿಳಿಸಲಾಗಿದೆ.

ಆದ್ದರಿಂದ ಶ್ರೀ ಎಸ್. ಜಿ. ಬಿರಾದಾರ್, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ರವರು ನೀಡಿರುವ ಉತ್ತರವನ್ನು ದಾಖಲೆಗಲೊಂದಿಗೆ ಪರಿಶೀಲಿಸಿ ಇವರು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಕೆಯಲ್ಲಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಇಲಾಖಾ ವಿಚಾರಣೆಗೆ ಸಂಬಂಧಪಟ್ಟ ಕಡತವನ್ನು ಅವರ ಆದೇಶಕ್ಕಾಗಿ ಮಂಡಿಸದ ಕಾರಣ ಹಾಗೂ ನಗರಾಭಿವೃದ್ಧಿ ಇಲಾಖೆಯ ಶಿಫಾರಸ್ಸು ಮಾಡಿರುವಂತೆ ಆರೋಪಿತ ಅಧಿಕಾರಿಗಳು ನೀಡಿರುವ ಉತ್ತರಗಳು ಸಮಂಜಸವೆಂದು ಕಂಡುಬಂದಿರುವ ಹಿನ್ನೆಲೆಯಲ್ಲಿ ಇವರ ಉತ್ತರವನ್ನು ಒಪ್ಪಿ ಇವರನ್ನು ಆರೋಪಗಳಿಂದ ಮುಕ್ತರನ್ನಾಗಿಸಲು ಸರ್ಕಾರವು ತೀರ್ಮಾನಿಸಿದೆ ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 164 ಕೆಇವಿ 2007, ಬೆಂಗಳೂರು, ದಿನಾಂಕ: 15ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀ ಎಸ್. ಜಿ. ಬಿರಾದಾರ್, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ರವರನ್ನು ದಿನಾಂಕ 23–12–2006ರ ನೊಟೀಸಿನಲ್ಲಿ ಮಾಡಲಾದ ಆರೋಪಗಳಿಂದ ಆರೋಪ ಮುಕ್ತರನ್ನಾಗಿಸುತ್ತದೆ.

ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಚ್. ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

ಪಿ.ಆರ್. 1627

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿ ವರ್ಗದವರಿಗೆ ಗೌರವಧನವನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಸಿಎಂ 160 ಜಿಇಎನ್ 2009, ದಿನಾಂಕ 26–03–2009.

2) ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 441/466 ಸೇ–2/2009, ದಿನಾಂಕ 31–05–2010

ಪ್ರಸ್ತಾವನೆ :

ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ರೂ. 200/–ಗಳ ಗೌರವ ಧನವನ್ನು ನೀಡುವ ಕ್ರಮವನ್ನು ತ್ವರಿತವಾಗಿ ತೆಗೆದುಕೊಳ್ಳಬೇಕೆಂದು ಹಾಗೂ ಬೆಳಗಾವಿ ಅಧಿವೇಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ (ಗುತ್ತಿಗೆ ಆಧಾರದ ಮೇಲಿನ ಅಧಿಕಾರಿ/ನೌಕರರನ್ನೊಳಗೊಂಡಂತೆ) ರೂ. 100/– ಗಳ ಹೆಚ್ಚುವರಿ ಗೌರವಧನವನ್ನು ಮಂಜೂರು ಮಾಡುವಂತೆ ಕೋರಲಾಗಿದೆ.

ಅದರಂತೆ ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 69 ಸಅಸೇ 2009, ಬೆಂಗಳೂರು, ದಿನಾಂಕ: 21ನೇ ಜೂನ್, 2010

ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೂ ಸಹ ವಿಧಾನಮಂಡಲದ ಅಧಿವೇಶನ ನಡೆಯುವ ಸಮಯದಲ್ಲಿ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 379 ಸಅಸೇ 2006, ದಿನಾಂಕ 22–06–2007ರಲ್ಲಿ ನೀಡಿರುವ ದರದಂತೆ ದಿನವೊಂದಕ್ಕೆ ರೂ. 125/–ಗಳ ಗೌರವಧನವನ್ನು ದಿನಾಂಕ 04–06–2008 ರಿಂದ ಜಾರಿಗೆ ಬರುವಂತೆ ಹಾಗೂ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮತ್ತು ಇದನ್ನು ಯಾವುದೇ ಕಾರಣಕ್ಕೂ ಪೂರ್ವ ನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ ಎಂಬ ಷರತ್ತಿನೊಂದಿಗೆ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 441/466 ಸೇ–2/2009, ದಿನಾಂಕ 31–05–2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಚ್. ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1628 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯಲ್ಲಿ ಬರುವ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸುವ ಬಗ್ಗೆ.

ಓದಲಾಗಿದೆ : ಪತ್ರ ಸಂ. ಮುಇಂ./ಸನೀ(ಉ)/ವ/ಬಿಜೆಪಿ/ಎಇ–1:2009–10/2517, ದಿನಾಂಕ 8–4–2009

ಪ್ರಸ್ತಾವನೆ :

ಸಣ್ಣ ನೀರಾವರಿ ವಿಭಾಗ, ಬೆಳಗಾಂ ವ್ಯಾಪ್ತಿಯಲ್ಲಿ ಈ ಕೆಳಕಂಡ 9 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿರುವುದರಿಂದ ಸದರಿ ಯೋಜನೆಗಳನ್ನು ಶಾಶ್ವತವಾಗಿ ನಿಷ್ಕ್ರಿಯಗೊಳಿಸಲು ಸರ್ಕಾರದ ಅನುಮೋದನೆ ನೀಡುವಂತೆ ಮೇಲೆ ಓದಲಾದ ದಿನಾಂಕ 8–4–2009ರ ಪತ್ರದಲ್ಲಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿರುತ್ತಾರೆ.

ಕ್ರಮ ಸಂಖ್ಯೆ	ತಾಲ್ಲೂಕು	ಯೋಜನೆ	ನಿರ್ಮಾಣವಾದ ವರ್ಷ
1.	ಬೆಳಗಾಂ	ಸಂತಿ ಬಸ್ತವಾಡ ಏತ ನೀರಾವರಿ ಯೋಜನೆ	1978
2.	ಬೆಳಗಾಂ	ಬೆಳಗುಂದಿ ಏತನೀರಾವರಿ ಯೋಜನೆ	1985–86
3.	ಅಥಣಿ	ಇಂಗಳಗಾಂವ ಏತ ನೀರಾವರಿ ಯೋಜನೆ	1982

4.	ಅಥಣಿ	ಕಾಗವಾಡ ಏತ ನೀರಾವರಿ ಯೋಜನೆ	1973–74
5.	ಅಥಣಿ	ಮಂಗಾವಾತಿ ಏತ ನೀರಾವರಿ ಯೋಜನೆ	1978–79
6.	ಅಥಣಿ	ಐನಾಪುರ ಏತ ನೀರಾವರಿ ಯೋಜನೆ	1991
7.	ಚಿಕ್ಕೋಡಿ	ಬೋಜ ಏತ ನೀರಾವರಿ ಯೋಜನೆ	1978–79
8.	ಗೋಕಾಕ್	ಅವರಾದಿ ಏತ ನೀರಾವರಿ ಯೋಜನೆ	1992
9.	ರಾಮದುರ್ಗ	ರಂಕಲಕೊಪ್ಪ ಏತ ನೀರಾವರಿ ಯೋಜನೆ	1992

ಮುಖ್ಯ ಇಂಜಿನಿಯರ್‌ರವರ ವರದಿಯ ಪ್ರಕಾರ ಮೇಲ್ಕಂಡ ಏತ ನೀರಾವರಿ ಯೋಜನೆಗಳು ಕೆಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿ ಕೆಲವೊಂದು ಕಾರಣಗಳಿಂದ ಸ್ಥಗಿತಗೊಂಡಿವೆ. ಕ್ರಮ ಸಂಖ್ಯೆ 6 ರ ಏತ ನೀರಾವರಿ ಯೋಜನೆಗೆ ರೈತರಿಂದ ಬೇಡಿಕೆ ಬಾರದೇ ಇರುವುದರಿಂದ ಯೋಜನೆಯು ಕಾರ್ಯ ನಿರ್ವಹಿಸದೇ ಇರುವುದರಿಂದ ಪಂಪ್‌ಸೆಟ್‌ಗಳು ದುರಸ್ಥಿಯಲ್ಲಿರುತ್ತವೆ. ಉಳಿದ ಎಲ್ಲಾ ಏತ ನೀರಾವರಿ ಯೋಜನೆಗಳು ಕೆಲವು ವರ್ಷಗಳ ವರೆಗೆ ಕಾರ್ಯ ನಿರ್ವಹಿಸಿದ್ದು, ತದನಂತರ ಸಮರ್ಪಕವಾಗಿ ವಿದ್ಯುತ್ ಸೌಲಭ್ಯ ಲಭ್ಯವಿರದ ಕಾರಣ ರೈತರು ಸ್ವಂತ ಪಂಪ್‌ಸೆಟ್‌ಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಿಕೊಂಡಿರುವುದರಿಂದ ಏತ ನೀರಾವರಿ ಯೋಜನೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ.

ಮೇಲ್ಕಂಡ ಎಲ್ಲಾ 9 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿದ್ದು, ಈ ಯೋಜನೆಯ ಅಚ್ಚುಕಟ್ಟಿನ ರೈತರಿಂದ ನೀರಿನ ಬೇಡಿಕೆ ಇಲ್ಲದಿರುವುದರಿಂದ ಇವುಗಳನ್ನು ಪನಃಶ್ಚೇತಗೊಳಿಸುವ ಅವಶ್ಯಕತೆ ಇರುವುದಿಲ್ಲ. ಯೋಜನೆಗಳಿಗೆ ಬಳಸುವ ಯಂತ್ರ ಕಟ್ಟಡ, ಹಾಗೂ ಸಾಮಗ್ರಿಗಳು ನಶಿಸುವ ಹಂತದಲ್ಲಿರುವುದರಿಂದ ಈ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 16 ಏನಿಯೋ 2009, ಬೆಂಗಳೂರು, ದಿನಾಂಕ: 16ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ವಿಭಾಗ ಬೆಳಗಾಂ ವ್ಯಾಪ್ತಿಯಲ್ಲಿ ಬರುವ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುವ ಮೇಲ್ಕಂಡ 9 ಏತ ನೀರಾವರಿ ಯೋಜನೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿಷ್ಕ್ರಿಯಗೊಳಿಸಲು ಸರ್ಕಾರದ ಅನುಮೋದನೆ ನೀಡಿದೆ.

1) ಸಂಬಂಧಪಟ್ಟ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಆಯೋಜಿಸಿ ಸಭೆಗೆ ಈ ವಿಷಯವನ್ನು ಮಂಡಿಸಿ ಗೊತ್ತುವಳಿಯನ್ನು ಹೊರಡಿಸುವುದು.

2) ಮುಂದಿನ ದಿನಗಳಲ್ಲಿ ಇದೇ ಸ್ಥಳಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ನಿರ್ಮಿಸದಿರುವ ಬಗ್ಗೆ ಜಾಗ್ರತೆವಹಿಸುವುದು.

3) ಪ್ರಸ್ತಾಪಿತ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸುವ ಸಂದರ್ಭದಲ್ಲಿ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 6–4–2006 ಮತ್ತು 7–4–2006 ರಂದು ನಡೆದ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳುವುದು.

4) ಈ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸಿರುವುದರಿಂದ ಯೋಜನೆಗಾಗಿ ಬಳಸಿರುವ ಯಂತ್ರೋಪಕರಣಗಳನ್ನು ಇತರೆ ಯೋಜನೆಗಳಿಗೆ ಅಳವಡಿಸಿಕೊಳ್ಳುವುದು ಹಾಗೂ ನಿರುಪಯುಕ್ತ ಯಂತ್ರೋಪಕರಣವನ್ನು ನಿಯಮಾನುಸಾರ ವಿಲೇ ಮಾಡಲು ಕ್ರಮ ಜರುಗಿಸುವುದು.

5) ಈ ಏತ ನೀರಾವರಿ ಯೋಜನೆಗಳಿಗಾಗಿ ನಿರ್ಮಿಸಿರುವ ಕಟ್ಟಡ ಹಾಗೂ ಜಮೀನುಗಳನ್ನು ನಿಯಮಾನುಸಾರ ವಿಲೇ ಮಾಡಲು ಹಾಗೂ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಲು ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1629

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಅಲ್ಫೋನ್ಸಿಸ್, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು ಇವರನ್ನು ಅಮಾನತ್ತಿನಲ್ಲಿಟ್ಟಿರುವುದಾಗಿ ಭಾವಿಸತಕ್ಕ ಆದೇಶ ನೀಡಿಕೆ.

ಓದಲಾಗಿದೆ : 1) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ : ಗಭೂಇ/ಸಿಬ್ಬಂದಿ–ಅ–3/ಲೋಕ್/ಅಪ್–ಫಾ/ಹಿಭೂವಿ/2010–11/1369, ದಿನಾಂಕ 10–05–2010.

2) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ : ಗಭೂಇ/ಸಿಬ್ಬಂದಿ ಅ–3/ಕಲೋಅ/2010–11/1604, ದಿನಾಂಕ 21–05–2010.

3) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಇವರ ದಿನಾಂಕ 25–05–2010ರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಬಿಡಿ–16/ಸಿಆರ್–8/2010/ಬಿಎಲ್‌ಆರ್.

ಪ್ರಸ್ತಾವನೆ :

ಶ್ರೀ ಅಲ್ಫೋನ್ಸಿಸ್, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಇವರು ದಿನಾಂಕ 27–03–2010 ರಂದು ಮಾನ್ಯ ಲೋಕಾಯುಕ್ತ ಪೊಲೀಸರ ಧಾಳಿಗೊಳಗಾಗಿ ಲಂಚ ಪ್ರಕರಣದಲ್ಲಿ ಸಿಲುಕ್ಕಿದ್ದರಿಂದ ದಿನಾಂಕ 27–03–2010 ರಿಂದ ಕಾರಾಗೃಹವಾಸ ಬಂಧನದಲ್ಲಿದ್ದಿದ್ದರ ಮೇರೆಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 10(2)(ಎ)ರ ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮಗಳ 102ರ ಮೇರೆಗೆ ಕ್ರಮಕೈಗೊಳ್ಳಲು ಇಲಾಖಾ ಮುಖ್ಯಸ್ಥರಿಗೆ ಅವಕಾಶವಿಲ್ಲದಿರುವುದರಿಂದ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ (1)ರ ಪತ್ರದಲ್ಲಿ ಸರ್ಕಾರದ ಸೂಕ್ತ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಅಪಾದಿತ ಅಧಿಕಾರಿಯನ್ನು ದಿನಾಂಕ 27–3–2010 ರಂದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ದಿನಾಂಕ 30–3–2010ರಲ್ಲಿ ನ್ಯಾಯಾಂಗ ಬಂಧನದಿಂದ ಬಿಡುಗಡೆ ಮಾಡಲಾಗಿರುತ್ತದೆ ಎಂದು ಪೊಲೀಸ್ ಉಪ ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕರ್ನಾಟಕ ಲೋಕಾಯುಕ್ತ ಇವರು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರಿಗೆ ಸಲ್ಲಿಸಿರುವ ದಿನಾಂಕ 19–5–2010ರ ಪತ್ರ ಸಂಖ್ಯೆ : ಕ್ರ.ಲೋ/ಬೆಂಗ್ರಾಜಿ:ಮೊ:ಸಂ–08/2010ರಲ್ಲಿ ತಿಳಿಸಿರುತ್ತಾರೆ.

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ 25–05–2010ರ ಪತ್ರದಲ್ಲಿ, ಶ್ರೀ ಅಲ್ಫೋನ್ಸಿಸ್, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು, ಇವರ ಮೇಲಿನ ಭ್ರಷ್ಟಾಚಾರದ ಅಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಈ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ತಕ್ಷಣವೇ ಅಮಾನತ್ತಿನಲ್ಲಿಡಲು ಹಾಗೂ ಇವರ ಲೀನ್ ಅನ್ನು ಬೇರೆಡೆಗೆ ವರ್ಗಾಯಿಸಲು ಶಿಫಾರಸ್ಸು ಮಾಡಿದ್ದು, ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ.

ಈ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 58 ಎಂಜಿಎಸ್ 2010, ಬೆಂಗಳೂರು, ದಿನಾಂಕ: 19ನೇ ಜೂನ್, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಶ್ರೀ ಅಲ್ಫೋನ್ಸಿಸ್, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು, ಇವರನ್ನು ದಿನಾಂಕ 27–03–2010 ರಿಂದ ದಿನಾಂಕ 30–3–2010ರವರೆಗೆ ನ್ಯಾಯಾಂಗ ಬಂಧನದಲ್ಲಿಟ್ಟಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 10ರ ಉಪನಿಯಮ (2) ರ ಮೇರೆಗೆ ಶ್ರೀ ಅಲ್ಫೋನ್ಸಿಸ್, ಹಿರಿಯ ಭೂವಿಜ್ಞಾನಿ (ಖನಿಜ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು, ಇವರನ್ನು ಇವರು ಬಂಧನದಲ್ಲಿದ್ದ ದಿನದಿಂದ ಎಂದರೆ ದಿನಾಂಕ 27–3–2010 ರಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿರುವುದಾಗಿ ಭಾವಿಸತಕ್ಕದೆಂದು ಸರ್ಕಾರವು ಈ ಮೂಲಕ ಆದೇಶಿಸಿದೆ.

ಇವರ ಲೀನ್ ಅನ್ನು ಗಣಿ ಮತ್ತು ಭೂಮಿಜ್ಞಾನ ಇಲಾಖೆಯ ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎ. ಪಿ. ರಾಮಕೃಷ್ಣ)
ಪೀಠಾಧಿಕಾರಿ (ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 1630

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೆ ಮತ್ತು ಯೋಜನೇತರ ಹುದ್ದೆಗಳನ್ನು ದಿನಾಂಕ 1-4-2010 ರಿಂದ 31-3-2011ರವರೆಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 77 ಕೆಎಂಯು 2008 ದಿನಾಂಕ 17-07-2008.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 104 ಕೆಎಂಯು 2009 ದಿನಾಂಕ 01-08-2009.
3. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರ ಪತ್ರ ಸಂಖ್ಯೆ: ಡಿಎಎಂ: ಇಎಸ್‌ಟಿ:1:ಕ. ಸಂ.: 338:2009-10/257 ದಿನಾಂಕ: 08-03-2010.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 17-07-2008ರ ಸರ್ಕಾರಿ ಆದೇಶದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೇತರ 26 ಹುದ್ದೆಗಳು ಹಾಗೂ ಯೋಜನೆಯ 7 ಹುದ್ದೆಗಳು ಸೇರಿದಂತೆ ಒಟ್ಟು 33 ಹುದ್ದೆಗಳನ್ನು ದಿನಾಂಕ 31-03-2009ರವರೆಗೆ ಮುಂದುವರೆಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ 01-08-2009 ರ ಸರ್ಕಾರಿ ಆದೇಶದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೇತರ 26 ಹುದ್ದೆಗಳು ಹಾಗೂ ಯೋಜನೆಯ 7 ಹುದ್ದೆಗಳು ಸೇರಿದಂತೆ ಒಟ್ಟು 33 ಹುದ್ದೆಗಳನ್ನು ದಿನಾಂಕ 01-04-2009 ರಿಂದ ದಿನಾಂಕ 31-03-2010ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ದಿನಾಂಕ 08-03-2010 ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಅವರು ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಹಾಗೂ ಕಮಿಟೆಡ್ ಯೋಜನೇತರ 7 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದ್ದು, ಸದರಿ ಹುದ್ದೆಗಳ ಮುಂದುವರಿಕೆ ಆದೇಶವು ದಿನಾಂಕ 31-03-2010ಕ್ಕೆ ಅಂತ್ಯಗೊಳ್ಳಲಿದೆ ಎಂದು ತಿಳಿಸಿ, ಕಮಿಟೆಡ್ ಯೋಜನೇತರ 7 ಹುದ್ದೆಗಳು ಹಾಗೂ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ದಿನಾಂಕ 1-4-2010 ರಿಂದ 31-3-2011 ರವರೆಗಿನ ಅವಧಿಗೆ ಮುಂದುವರಿಸಿ ಅಧಿಕಾರಿ ಹಾಗೂ ಸಿಬ್ಬಂದಿಗಳ ವೇತನ ಪಾವತಿಸಲು ಅನುವಾಗುವಂತೆ ಮುಂದುವರಿಕೆ ಆದೇಶವನ್ನು ಶೀಘ್ರವಾಗಿ ಹೊರಡಿಸಲು ಕೋರಿ, ಚೆಕ್ ಲಿಸ್ಟ್‌ನ್ನು ಲಗತ್ತಿಸಿರುತ್ತಾರೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೆ ಮತ್ತು ಯೋಜನೇತರ ಹುದ್ದೆಗಳನ್ನು ದಿನಾಂಕ 1-4-2010 ರಿಂದ 31-3-2011ರವರೆಗೆ ಮುಂದುವರಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 60 ಕೆಎಂಯು 2010, ಬೆಂಗಳೂರು, ದಿನಾಂಕ 15-06-2010.

ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಅವರು ಪ್ರಸ್ತಾವನೆಯಲ್ಲಿ ಕೋರಿರುವಂತೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಈ ಕೆಳಕಂಡ ಒಟ್ಟು 33 ಹುದ್ದೆಗಳನ್ನು ದಿನಾಂಕ 1-4-2010 ರಿಂದ 31-3-2011ರವರೆಗೆ ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಿದೆ.

1. ಲೆಕ್ಕ ಶೀರ್ಷಿಕೆ 2205-00-103-0-01 (ಕಮಿಟೆಡ್ ನಾನ್‌ಪ್ಲಾನ್)
   1. ಉಪ ನಿರ್ದೇಶಕರು – 1
   2. ಪುರಾತತ್ವ ಸಹಾಯಕರು – 2
   3. ಅಟೆಂಡರ್ – 1

   – 4 ಹುದ್ದೆಗಳು
2. ಲೆಕ್ಕ ಶೀರ್ಷಿಕೆ 2205-00-107-0-01 (ಕಮಿಟೆಡ್ ನಾನ್‌ಪ್ಲಾನ್)
   1. ಕ್ಯುರೇಟರ್ – 3 ಹುದ್ದೆಗಳು

   ಒಟ್ಟು ಕಮಿಟೆಡ್ ನಾನ್‌ಪ್ಲಾನ್ 7 ಹುದ್ದೆಗಳು
3. ಲೆಕ್ಕ ಶೀರ್ಷಿಕೆ 2205-00-103-0-01 (ಯೋಜನೇತರ) (ತಾತ್ಕಾಲಿಕ)
   1. ಸಹಾಯಕ ನಿರ್ದೇಶಕರು (ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ) – 1
   2. ಪುರಾತತ್ವ ಸಹಾಯಕರು – 1
   3. ಮಾನ್ಯುಮೆಂಟ್ ಅಟೆಂಡೆಂಟ್ಸ್ – 5

   7 ಹುದ್ದೆಗಳು

4. ಲೆಕ್ಕಶೀರ್ಷಿಕೆ 2205–00–107–0–01 (ಯೋಜನೇತರ) (ತಾತ್ಕಾಲಿಕ)

1. ಕ್ಯುರೇಟರ್	–	2
2. ದ್ವಿತೀಯ ದರ್ಜೆ ಸಹಾಯಕರು	–	5
3. ಅಟೆಂಡರ್	–	1
4. ಗ್ರೂಪ್–ಡಿ	–	8
5. ಪ್ಯೂನ್	–	2
6. ರಾತ್ರಿ ಕಾವಲುಗಾರ	–	1
		19 ಹುದ್ದೆಗಳು
ಒಟ್ಟು ಯೋಜನೇತರ (ತಾತ್ಕಾಲಿಕ)		26 ಹುದ್ದೆಗಳು

ಘೋಷ್ವಾರೆ

1) ಕಮಿಟೆಡ್ ಯೋಜನೇತರ ಹುದ್ದೆಗಳು	–	7
2) ತಾತ್ಕಾಲಿಕ ಯೋಜನೇತರ ಹುದ್ದೆಗಳು	–	26
ಒಟ್ಟು ಹುದ್ದೆಗಳು		33

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 310 ಐಎಫ್ಎಸ್ 2010, ದಿನಾಂಕ 22–04–2010 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10–07–96 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1591

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಕೆ. ಹೇಮಾಜಿ ನಾಯಕ್, ಕೆ.ಎ.ಎಸ್. ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ–ಸನ್ಮಾನ್ಯ ಲೋಕಾಯುಕ್ತರಿಂದ ಹಿಂದಕ್ಕೆ ಪಡೆದು ಮುಕ್ತಾಯಗೊಳಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 61 ಎಸ್‌ಇಎನ್ 2003 ದಿನಾಂಕ: 20–08–2003.

ಪ್ರಸ್ತಾವನೆ:

ಶ್ರೀ ಕೆ. ಹೇಮಾಜಿನಾಯಕ್, ಕೆ.ಎ.ಎಸ್. ಅಧಿಕಾರಿ ರವರು ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹೇಮಾವತಿ ನೀರಾವರಿ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಹಾಗೂ ಶ್ರೀ ರಂಗೇಗೌಡ ಇವರು ಸದರಿಯವರ ಕಛೇರಿಯಲ್ಲಿ ಕಂದಾಯ ನಿರೀಕ್ಷಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ಹೊಳೆನರಸೀಪುರ ತಾಲ್ಲೂಕು ಗುಲಗಂಜಿ ಹಳ್ಳಿ ಗ್ರಾಮದ ವಾಸಿ ಶ್ರೀ ಕಾಳೇಗೌಡ ಬಿನ್ ಪಾಪೇಗೌಡ, ಉರುಫ್ ಮರೀಗೌಡ ಇವರ ತಂದೆಯ ಹೆಸರಿನಲ್ಲಿರುವ ಗುಲಗಂಜಿ ಹಳ್ಳಿ ಗ್ರಾಮದ ಸರ್ವೆ ನಂ. 170:9 ರಲ್ಲಿನ 3 ಎಕರೆ 2 ಗುಂಟೆ ಜಮೀನಿನ ಪೈಕಿ 19 ಗುಂಟೆ ಜಮೀನನ್ನು ಹೇಮಾವತಿ ಬಲದಂಡೆ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸಂಬಂಧ ಪರಿಹಾರಧನ ಪಾವತಿ ಮಾಡಲು ಅಕ್ರಮ ಸಂಭಾವನೆ ಪಡೆಯುತ್ತಿರುವಾಗಲೇ ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಶ್ರೀ ಬಿ. ರಂಗೇಗೌಡ, ಕಂದಾಯ ನಿರೀಕ್ಷಕರು ಸಿಕ್ಕಿ ಬಿದ್ದಿರುತ್ತಾರೆ. ಆನಂತರ ನಡೆದ ತನಿಖೆಯಲ್ಲಿ ಅವರುಗಳು ಎಸಗಿದ ಆರೋಪಗಳು ಮೇಲ್ನೋಟಕ್ಕೆ ನಿಜವಿರುವುದಾಗಿ ಕಂಡುಬಂದಿದ್ದರಿಂದ ಅವರುಗಳ ವಿರುದ್ಧ ಕಠಿಣ ದಂಡನೆ ವಿಧಿಸುವ ವಿಧಿ–ವಿಧಾನಗಳಿಗೆ ಅಳವಡಿಸಿ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಸನ್ಮಾನ್ಯ ಲೋಕಾಯುಕ್ತರು ಕಲಂ 12(3)ರ ಪ್ರಕಾರ ಶಿಫಾರಸ್ಸು ಮಾಡಿದ್ದರು. ಅದರಂತೆ ಸರ್ಕಾರವು ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೆ. ಹೇಮಾಜಿ ನಾಯಕ್, ಕೆ.ಎ.ಎಸ್. ಇವರ ವಿರುದ್ಧದ ಆರೋಪದ ಕುರಿತು ಸನ್ಮಾನ್ಯ ಲೋಕಾಯುಕ್ತರ ಮೂಲಕ ವಿಚಾರಣೆ ನಡೆಸಲು ಮೇಲೆ ಓದಲಾದ ದಿನಾಂಕ: 20–08–2003ರ ಆದೇಶದಲ್ಲಿ ಆದೇಶಿಸಲಾಗಿತ್ತು. ಶ್ರೀಯುತರು ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ಮಂಡಳಿಯಲ್ಲಿ ಅರ್ಜಿ ಸಂ.: 8613/2003 ರನ್ನು ಸಲ್ಲಿಸಿದ್ದು ಕರ್ನಾಟಕ ಆಡಳಿತ ನ್ಯಾಮಮಂಡಳಿಯು ದಿನಾಂಕ: 23–06–04ರ ಮಧ್ಯಂತರ ಆದೇಶದಲ್ಲಿ ಮುಂದಿನ ವಿಚಾರಣೆಗೆ ತಡೆಯಾಜ್ಞೆಯನ್ನು ನೀಡಿತ್ತು. ನಂತರ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ತನ್ನ ದಿನಾಂಕ: 29–01–2010ರ ಅಂತಿಮ ಆದೇಶದಲ್ಲಿ ತೀರ್ಪು ನೀಡಿ ಶ್ರೀ ಕೆ. ಹೇಮಾಜಿ ನಾಯಕ್, ಕೆ.ಎ.ಎಸ್. ಇವರ ಅರ್ಜಿಯನ್ನು ಪುರಸ್ಕರಿಸಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತರವರು ಮಾಡಿದ ಶಿಫಾರಸ್ಸು ಹಾಗೂ ಸರ್ಕಾರದ ದಿನಾಂಕ: 20–08–2003ರ ಆದೇಶವನ್ನು ಅಸಿಂಧುಗೊಳಿಸಿರುತ್ತದೆ.

ಈ ಸಂಬಂಧವಾಗಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿನಾಂಕ: 29–01–2010 ರಂದು ನೀಡಿರುವ ಆದೇಶ ಈ ಕೆಳಕಂಡಂತಿರುತ್ತದೆ.

> In that view of the matter, we are of the opinion that re-opening of the case and its re-examination by the Lokayuktha and his recommendation to initiate a departmental inquiry against this applicant were without authority of law. Consequently, the order of the Government directing inquiry is not sustainable. Therefore, the application is allowed and the recommendation of the Lokayuktha and the Government Order ಸಿಆಸುಇ 61 ಎಸ್‌ಇಎನ್ 2003 Dated 20-08-03 (Annexure A11) are hereby quashed. Consequently, any further action taken by the Lokayuktha in nominating the inquiring Authority and further proceedings in inquiry are held as illegal.

ಈ ತೀರ್ಪನ್ನು ಪರಿಶೀಲಿಸಿದ ಸರ್ಕಾರಿ ವಕೀಲರು ಈ ಪ್ರಕರಣವು ಮೇಲ್ಮನವಿ ಸಲ್ಲಿಸಲು ಯೋಗ್ಯವಲ್ಲವೆಂದು ಅಭಿಪ್ರಾಯ ನೀಡಿದ್ದು ಹಾಗೂ ಸಿ.ಆ.ಸು. ಇಲಾಖೆಯ ಕಾನೂನು ಕೋಶದ ಮುಖ್ಯಸ್ಥರು ಕೂಡ ಸರ್ಕಾರಿ ವಕೀಲರ ಅಭಿಪ್ರಾಯವನ್ನು ಒಪ್ಪಿದ್ದು ಕಾನೂನು ಇಲಾಖೆಯೂ ಸಹ ಈ ಅಭಿಪ್ರಾಯವನ್ನು ಪುಷ್ಟೀಕರಿಸಿ. ಈ ಪ್ರಕರಣವು ಮೇಲ್ಮನವಿ ಸಲ್ಲಿಸಲು ಯೋಗ್ಯವಲ್ಲವೆಂದು ತಿಳಿಸಿರುವುದನ್ನು ಮನಗಂಡು ಶ್ರೀ ಕೆ. ಹೇಮಾಜಿ ನಾಯಕ್, ಕೆ.ಎ.ಎಸ್. ಇವರ ವಿರುದ್ಧ ಸಿ.ಸಿ.ಎ. ನಿಯಮಾವಳಿಗಳ ನಿಯಮ 14(ಎ) ರ ಪ್ರಕಾರ ಇಲಾಖಾ ವಿಚಾರಣೆ ನಡೆಸಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿದ್ದ ಆದೇಶವನ್ನು ಹಾಗೂ ಇದಕ್ಕೆ ಪೂರಕವಾಗಿ ಸನ್ಮಾನ್ಯ ಲೋಕಾಯುಕ್ತರು ವಿಚಾರಣಾಧಿಕಾರಿಯನ್ನು ನೇಮಿಸಿ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿರುವುದರಿಂದಲೂ ಸರ್ಕಾರವು ಈ ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 134 ಎಸ್‌ಇಎನ್ 2003, (ಸಿಆಸುಇ 94 ಕೆಇವಿ 2007), ಬೆಂಗಳೂರು, ದಿನಾಂಕ: 15ನೇ ಜೂನ್ 2010.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಶ್ರೀ ಕೆ. ಹೇಮಾಜಿನಾಯಕ್, ಕೆ.ಎ.ಎಸ್. ಅಧಿಕಾರಿ ಅಂದಿನ ವಿಶೇಷ ಭೂಸ್ವಾಧೀನಾಧಿಕಾರಿ ಹೇಮಾವತಿ ನೀರಾವರಿ ಯೋಜನೆ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ, ಹಾಲಿ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ ಮತ್ತು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ ಇವರ ವಿರುದ್ಧ ಮಾಡಲಾದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ನಡೆಸಲು ಸನ್ಮಾನ್ಯ ಲೋಕಾಯುಕ್ತರಿಗೆ ದಿನಾಂಕ: 20–08–2003ರ ಆದೇಶದಲ್ಲಿ ವಹಿಸಲಾಗಿದ್ದ ವಿಚಾರಣೆಯನ್ನು ಕೈ ಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1592

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ರಾಜ್ಯ ಪ್ರತಿನಿಧಿಗಳ ಹುದ್ದೆಗೆ ಉಪವಿಭಾಗಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಅಧಿನಿಯಮ 1976 (1976 ರ ಕರ್ನಾಟಕ ಅಧಿನಿಯಮ ಸಂಖ್ಯೆ.10)

2) ದಿನಾಂಕ : 4–3–2009 ರಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸರ್ಕಾರಿ ವಕೀಲರನ್ನು ನೇಮಿಸುವ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಪ್ರಸ್ತುತ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಎರಡು ಕಂದಾಯ ಪೀಠಗಳು ಅಸ್ತಿತ್ವದಲ್ಲಿದ್ದು, ನ್ಯಾಯಾಧಿಕರಣದಲ್ಲಿ ಸರ್ಕಾರದ ಪರವಾಗಿ ವಾದ ಮಂಡಿಸಲು ಇಬ್ಬರು ತಹಶೀಲ್ದಾರ್ ದರ್ಜೆಯ ಅಧಿಕಾರಿಗಳು ಸಹಾಯಕ ರಾಜ್ಯಪ್ರತಿನಿಧಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸರ್ಕಾರದ ಅಸ್ತಿಗಳಿಗೆ ಸಂಬಂಧಿಸಿದಂತೆ ವಿವಾದಗಳಿಂದಾಗಿ ಕೆ.ಎ.ಟಿ.ಯಲ್ಲಿ ಮಹತ್ವದ ಪ್ರಕರಣಗಳು ದಾಖಲಾಗಿರುತ್ತವೆ. ಇಂತಹ ಪ್ರಕರಣಗಳಲ್ಲಿ ತಹಶೀಲ್ದಾರ್ ದರ್ಜೆಯ ಅಧಿಕಾರಿಗಳು ಸಮರ್ಪಕವಾಗಿ ಸರ್ಕಾರದ ಪರವಾಗಿ ವಾದ ಮಂಡಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸದರಿ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ಸರ್ಮರ್ಥವಾಗಿ ವಾದ ಮಂಡಿಸಲು ಗ್ರೂಪ್ –ಎ ವೃಂದದ ಅಧಿಕಾರಿಗಳನ್ನು (ಉಪವಿಭಾಗಾಧಿಕಾರಿಗಳ ವೃಂದ) ನೇಮಿಸಲು

ಉಲ್ಲೇಖ (2)ರ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದ್ದರಿಂದ ಉಲ್ಲೇಖ (1)ರ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಅಧಿನಿಯಮ 12 ರನ್ವಯ ಪ್ರದತ್ತವಾದ ಅಧಿಕಾರದನ್ವಯ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 874 ಆರ್‌ಎಂಇ 2008, ಬೆಂಗಳೂರು, ದಿನಾಂಕ: 28ನೇ ಆಗಸ್ಟ್ 2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿನ ಕಂದಾಯ ಪೀಠಗಳ ಸಹಾಯಕ ರಾಜ್ಯ ಪ್ರತಿನಿಧಿಗಳ ಹುದ್ದೆಗೆ, ತಹಶೀಲ್ದಾರ್ ವೃಂದದ ಅಧಿಕಾರಿಗಳಿಗೆ ಬದಲಾಗಿ ಉಪವಿಭಾಗಾಧಿಕಾರಿಗಳ ವೃಂದದ (ಗ್ರೂಪ್ –ಎ) ಅಧಿಕಾರಿಗಳನ್ನು ನೇಮಿಸಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಅಧಿನಿಯಮ 1976ರ ಕಲಂ 12(2)ರನ್ವಯ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಈ ಅಧಿಕಾರಿಗಳಿಗೆ ಒಂದೊಂದು ಆಪ್ತ ಸಹಾಯಕರನ್ನು (ಶೀಘ್ರಲಿಪಿಗಾರರ ವೃಂದದ) ಹಾಗೂ ಒಂದೊಂದು ಗ್ರೂಪ್–ಡಿ ವೃಂದದ ನೌಕರರನ್ನು ಒದಗಿಸಲು ಕ್ರಮವಹಿಸುವಂತೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ರಾಮಚಂದ್ರಯ್ಯ)

ಪಿ.ಆರ್. 2283

ರಾಜ್ಯಪ್ರತಿನಿಧಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಕೆಎಟಿ ಮತ್ತು ಬಾ.ನಿ.)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 114 ಸೇನೆನಿ ಬೆಂಗಳೂರು, ದಿನಾಂಕ : 21–8–2010

ವಿಷಯ : ಸರ್ಕಾರಿ ನೌಕರರನ್ನು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಯೋಜನೆ ಮೇಲೆ ನೇಮಿಸುವ ಬಗ್ಗೆ.

ಉಲ್ಲೇಖ : (1) ಸುತ್ತೋಲೆ ಸಂಖ್ಯೆ: ಡಿಸಿಎ 16 ಎಆರ್‌ಬಿ 81, ದಿನಾಂಕ : 18–11–1981
(2) ಸುತ್ತೋಲೆ ಸಂಖ್ಯೆ: ಡಿಸಿಎ 10 ಎಆರ್‌ಬಿ 89, ದಿನಾಂಕ : 20–11–1989
(3) ಸುತ್ತೋಲೆ ಸಂಖ್ಯೆ: ಡಿಸಿಎ 14 ಎಆರ್‌ಬಿ 90, ದಿನಾಂಕ : 6–3–1991
(4) ಸುತ್ತೋಲೆ ಸಂಖ್ಯೆ: ಡಿಸಿಎ 4 ಎಆರ್‌ಬಿ 93, ದಿನಾಂಕ : 6–10–1993
(5) ಸುತ್ತೋಲೆ ಸಂಖ್ಯೆ: ಡಿಸಿಎ 15 ಎಆರ್‌ಬಿ 93, ದಿನಾಂಕ : 14–12–1993
(6) ಸುತ್ತೋಲೆ ಸಂಖ್ಯೆ: ಡಿಸಿಎ 3 ಎಆರ್‌ಬಿ 95, ದಿನಾಂಕ : 22–03–1995

ಸರ್ಕಾರಿ ನೌಕರರನ್ನು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಯೋಜನೆ ಮೇಲೆ ನೇಮಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಸೂಚನೆಗಳನ್ನು ಹೊರಡಿಸಲಾಗಿದೆ.

ಸರ್ಕಾರಿ ನೌಕರರನ್ನು ನಿಯೋಜನೆ ಮೇಲೆ ನೇಮಿಸುವ ಪೂರ್ವದಲ್ಲಿ ಎರವಲು ಪಡೆಯುವ ಇಲಾಖೆ ಮತ್ತು ಎರವಲು ನೀಡುವ ಇಲಾಖೆಗಳು ಸರ್ಕಾರದ ಇಲಾಖಾ ಕಾರ್ಯದರ್ಶಿಯವರ ಮಟ್ಟದಲ್ಲಿ ಪರಸ್ಪರ ಸಮಾಲೋಚಿಸಬೇಕು ಹಾಗೂ ಎರವಲು ನೀಡುವ ಇಲಾಖೆಯು ಎರವಲು ಪಡೆಯುವ ಇಲಾಖೆಯ ಒಪ್ಪಿಗೆ ಪಡೆದ ನಂತರವೇ ಸಂಬಂಧಿಸಿದ ಸರ್ಕಾರಿ ನೌಕರರನ್ನು ಎರವಲು ಪಡೆಯುವ ಇಲಾಖೆಯ ವಶಕ್ಕೆ ಒಪ್ಪಿಸಬೇಕು ಎಂದು ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಲಾಗಿರುತ್ತದೆ. ಆದರೆ, ಈ ಸೂಚನೆಗಳನ್ನು ಉಲ್ಲಂಘಿಸಿ, ಲೋಕೋಪಯೋಗಿ ಇಲಾಖೆಯಲ್ಲಿ ಪರಿವೀಕ್ಷಣಾವಧಿಯಲ್ಲಿರುವ ಇಂಜಿನಿಯರುಗಳನ್ನು ಜಲ ಸಂಪನ್ಮೂಲ ಇಲಾಖೆಯೊಂದಿಗೆ ಸಮಾಲೋಚಿಸದೆ ಜಲ ಸಂಪನ್ಮೂಲ ಇಲಾಖೆಯಲ್ಲಿನ ಹುದ್ದೆಗಳಿಗೆ ನಿಯೋಜನೆ ಮೇಲೆ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲದೆ, ಪರಿವೀಕ್ಷಣಾವಧಿಯಲ್ಲಿರುವ ನೌಕರರ ಕರ್ತವ್ಯವನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರ ಸೂಕ್ಷ್ಮವಾಗಿ ಗಮನಿಸಿ ಪರಿವೀಕ್ಷಣಾವಧಿ ಮುಗಿದ ನಂತರ ಪರಿವೀಕ್ಷಣಾವಧಿ ಘೋಷಿಸಬೇಕಾಗಿರುವುದರಿಂದ ಪರಿವೀಕ್ಷಣಾವಧಿಯಲ್ಲಿರುವ ನೌಕರರನ್ನು ಅವರ ನೇಮಕಾತಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ನಿಯೋಜನೆ ಮೇಲೆ ನೇಮಕ ಮಾಡುವಂತಿಲ್ಲ. ಆ ರೀತಿ ಮಾಡಿದಲ್ಲಿ, ಸರ್ಕಾರದ ಒಂದು ಇಲಾಖೆಯು ಸರ್ಕಾರದ ಇನ್ನೊಂದು ಇಲಾಖೆಯ ಆಡಳಿತ ವಿಷಯದಲ್ಲಿ ಅನಗತ್ಯವಾಗಿ/ನೇರವಾಗಿ ಹಸ್ತಕ್ಷೇಪ ಮಾಡಿದಂತಾಗುತ್ತದೆ.

ಮೇಲ್ಕಂಡ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಆಡಳಿತ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಅವಕಾಶ ಮಾಡಿಕೊಡಬಾರದು. ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ಕೆ.ಆರ್. ಶ್ರೀನಿವಾಸ

ಪಿ.ಆರ್. 2284

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ